ಸಂಪುಟ : 8 ಸಂಚಿಕೆ : 160 ಪುಟ : 4 ಬೆಲೆ : 3.00 ಶುಕ್ರವಾರ ಜುಲೈ 28, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 160 Pages : 4 Price : 3.00 Friday July 28, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ನೀರು ಪೂರೈಕೆ ಮಾಹಿತಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಶುಕ್ರವಾರ ಈ ಕೆಳಗಿನ ಸ್ಥಳಗಳಲ್ಲಿ ನೀರು ಪೂರೈಕೆಯಾಗಲಿದೆ.

ವಾರ್ಡ್ ನಂ.35ರ ರಾಮನಗರ ಬಾಪೂಜಿ ನಗರ, ಕೆಇಬಿ ಲೇಔಟ್, ವಾರ್ಡ್ ನಂ.34ರ ಸರ್ವೋದಯ ಕಾಲನಿ, ಲಯನ್ಸ್ ಸ್ಕೂಲ್ ಸೇವಾಲಾಲ ನಗರ, ಕರಗಿ ಅವರ ಮಠದ ಲೈನ್, ಗರಗದವರ ಲೈನ್, ಅಬ್ಬಿಗೇರಿ ಅವರ ಲೈನ್, ವಾರ್ಡ್ ನಂ.33ರ ರಾಧಾಕೃಷ್ಣನಗರ, ಗುಜಮಾಗಡಿ ಲೈನ್, ವಾರ್ಡ್ ನಂ.6ರ ಸಿದ್ದಲಿಂಗನಗರ, ವಾರ್ಡ್ ನಂ.2ರ ನಾವಳ್ಳಿ ಅವರ ಲೈನ್, ರೊಟ್ಟಿಯವರ ಲೈನ್, ಫಣಿಬಂದ ಅವರ ಲೈನ್, ಪಿ ಪಿ ಗುಡಿ ಲೈನ್, ವಾರ್ಡ್ ನಂ.11ರ ನಿಸರ್ಗ ಬಡಾವಣೆ, ಅಬ್ದುಲ ಕಲಾಮ ಲೈನ್‌ಗಳಲ್ಲಿ ನೀರು ಪೂರೈಕೆಯಾಗುವುದು.

ಗದಗ ಭಾಗದಲ್ಲಿ ಬರುವ ಡಿ ಆಯ್ ಪೈಪ್‌ಲೈನ್ ಡಂಬಳನಾಕಾದಲ್ಲಿ ಸೋರಿಕೆಯ ರಿಪೇರಿ ನಡೆಯುತ್ತಿರುವುದರಿಂದ, ಗದಗ ಭಾಗಕ್ಕೆ ನೀರು ಸರಬರಾಜು ವಿಳಂಬವಾಗಲಿದೆ. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿಕ್ಕನರಗುಂದ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



**■ ವಿಜಯಸಾಕ್ಷಿ ಸುದ್ದಿ, ನರಗುಂದ**

ತಾಲೂಕಿನ ಚಿಕ್ಕನರಗುಂದ ಗ್ರಾಮ ಪಂಚಾಯಿತಿಯ ಮಹಿಳಾ (ಅ)ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ಅಧ್ಯಕ್ಷರಾಗಿ ಮಲ್ಲವ್ವ ಶಿ ಮರಿಯಣ್ಣವರ, ಸಾಮಾನ್ಯ ವರ್ಗಕ್ಕೆ ಮೀಸಲಾದ ಉಪಾಧ್ಯಕ್ಷ ಸ್ಥಾನಕ್ಕೆ ಈರಮ್ಮ ಮುದಿಗೌಡ್ರ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾ ಅಧಿಕಾರಿಯಾಗಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಎಸ್ ಎಮ್ ಬಡಿಗೇರ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಿ, ಅವಿರೋಧ ಆಯ್ಕೆ ಪ್ರಕಟಿಸಿ, ನೂತನ ಅಧ್ಯಕ್ಷರಾದ ಮಲ್ಲಮ್ಮ ಮರಿಯಣ್ಣವರ ಅವರಿಗೆ ಅಧಿಕಾರ ವಹಿಸಿಕೊಟ್ಟರು.

ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶೈನಾಜ್ ಮುಜಾವರ್, ಮಾಜಿ ಅಧ್ಯಕ್ಷರಾದ ಲಕ್ಷ್ಮಣ ಕಂಬಳಿ, ಸದಸ್ಯರಾದ ಬಾಪು ಹಿರೇಗೌಡ್ರ, ಶ್ರುತಿ ಬ್ಯಾಳಿ, ನಿರ್ಮಲಾ ತಳವಾರ, ಶಂಕ್ರಮ್ಮ ಚಲವಾದಿ, ಗ್ರಾಮದ ಹಿರಿಯರಾದ ಟಿ ಎಸ್ ಚನ್ನಪ್ಪಗೌಡ್ರ, ಎಸ್ ಎಸ್ ಯರಗಟ್ಟಿ, ಎಸ್ ವ್ಹಿ ರಾಯರಡ್ಡಿ, ಪಡಿಯಪ್ಪ ಮರಿಯಣ್ಣವರ, ಹನುಮಂತ ಚಾವಡಿ, ಬಸವರಾಜ್ ಹೊಂಗಲ, ರವಿ ಯರಗಟ್ಟಿ, ಮಲ್ಲಿಕಾರ್ಜುನ ಸಾತನ್ನವರ, ಮಲ್ಲನಗೌಡ ಸರ್ವಮಾನೆದ, ಮೋಹನ ಬಾಚಿ, ಪಕ್ಕೀರಪ್ಪ ಹೊಸಗಾಣಿಗೇರ ಮುಂತಾದವರು ಉಪಸ್ಥಿತರಿದ್ದರು.

## ಡಿಪ್ಲೋಮಾ ಪ್ರವೇಶದ ಅವಧಿ ವಿಸ್ತರಣೆ

**■ ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪಾಲಿಟೆಕ್ನಿಕ್, ನರಸಾಪೂರ, ಬೆಟಗೇರಿ ಗದಗ ಸಂಸ್ಥೆಯಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ತತ್ಸಮಾನ ಪರೀಕ್ಷೆಯಲ್ಲಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಖಾಲಿ ಇರುವ ಡಿಪ್ಲೋಮಾ ಕೋರ್ಸ ಸೀಟುಗಳಿಗೆ ಪ್ರಾಂಶುಪಾಲರ ಹಂತದಲ್ಲಿ ಆಫ್‌ಲೈನ್ ಮೂಲಕ ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಡಿಪ್ಲೋಮಾ ಪ್ರವೇಶ ಪಡೆಯಲು ದಿನಾಂಕವನ್ನು ಆಗಸ್ಟ್ 5 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾಲೇಜಿನ ಕಚೇರಿ ಅವಧಿಯಲ್ಲಿ ಪಡೆಯಬಹುದಾಗಿದೆ.

## ವಿಜೃಂಭಣೆಯಿಂದ ಸ್ವಾತಂತ್ರ್ಯೋತ್ಸವ ಆಚರಣೆಗೆ ನಿರ್ಧಾರ

**■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಕಳೆದ ಬಾರಿ ಕೋವಿಡ್ ಕಾರಣದಿಂದ ಸರಳವಾಗಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಗಿತ್ತು. ಈ ಬಾರಿ ಅತ್ಯಂತ ಸಂಭ್ರಮ ಹಾಗೂ ವಿಜೃಂಭಣೆಯಿಂದ ಸ್ವಾತಂತ್ರ್ಯೋತ್ಸವ ಆಚರಿಸಲಾಗುವುದು ಎಂದು ಹುಬ್ಬಳ್ಳಿ ಶಹರ ತಹಸೀಲ್ದಾರರಾದ ಕಲಗೌಡ ಪಾಟೀಲ್ ಹೇಳಿದರು.

ತಾಲ್ಲೂಕು ಆಡಳಿತಸೌಧದ ತಹಸೀಲ್ದಾರ್ ಕಚೇರಿ ಸಭಾಭವನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರಿ ಇಲಾಖೆಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಗುವುದು. ಪೊಲೀಸ್ ಇಲಾಖೆ, ಗೃಹ ರಕ್ಷಕ ದಳ, ಎನ್.ಸಿ.ಸಿ. ಸ್ಕೌಟ್ ಮತ್ತು ಗೈಡ್ಸ್ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಪರೇಡ್ ನಡೆಸಲು ಕ್ರಮ ವಹಿಸಬೇಕು. ಸ್ವಾತಂತ್ರ್ಯ ಹೋರಾಟಗಾರರ ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತದೆ. ವಿವಿಧ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲಿದ್ದಾರೆ. ವಿವಿಧ ಇಲಾಖೆಗಳಿಗೆ ಒದಗಿಸಿದ ಕೆಲಸಗಳನ್ನು ಸರಿಯಾಗಿ ನಿಭಾಯಿಸಬೇಕು ಎಂದರು.

ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಎಸ್.ಶಿವಳ್ಳಿಮಠ, ಗೃಹರಕ್ಷಕ ದಳದ ಕೃಷ್ಣಾ ಬ್ಯಾಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿ ಸುರೇಶ ಗುರಣ್ಣನವರ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಆನಂದ ಕಾಂಬಳೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ನಿಲಯ ಪಾಲಕರಾಗಿ ಮುಂಬಡ್ತಿ ಹೊಂದಿದವರಿಗೆ ಸನ್ಮಾನ

**■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಿಲಯ ಮೇಲ್ವಿಚಾರಕರಿಂದ ನಿಲಯ ಪಾಲಕರಾಗಿ ಮುಂಬಡ್ತಿ ಹೊಂದಿದ ರಾಮಯ್ಯ ಪೂಜಾರ, ಪ್ರಭಾಕರ ಮೋಟಗಿ, ಮಹೇಶ ಹಣಗಿ ಮತ್ತು ಶ್ರೀಪಾದ ಹುಲಕೋಟಿ ಅವರನ್ನು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯಾದ ಸಿ.ವಿ.ಕರವೀರಮಠ ಅವರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ವಾರ್ತಾ ಇಲಾಖೆಯ ಸಹಾಯಕ ಆಡಳಿತಾಧಿಕಾರಿ ವಿನೋದಕುಮಾರ ಡಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿಸ್ತೀರ್ಣಾಧಿಕಾರಿ ಸುರೇಶ ಗುರಣ್ಣನವರ, ಲಕ್ಷ್ಮೀ ಮೊರಬ, ಶೋಭಾ ಚಾಕಲಬ್ಬಿ, ಹಿರಿಯ ನಿಲಯ ಪಾಲಕರಾದ ಜಿ.ಬಿ.ಕಾಂಬಳೆ, ಕಂಪ್ಯೂಟರ್ ಆಪರೇಟರ್ ಅನಿತಾ ಬೆಕ್ಕಿನಕಣ್ಣವರ, ಪ್ರಸಾದ ಕಾಂಬಳೆ, ಎಂ.ಆಯ್. ಮುಜಾವರ ಸೇರಿದಂತೆ ಇತರರು ಉಪಸ್ಥಿತರಿದ್ದರು.

**24*7 ಕಂಟ್ರೋಲ್ ರೂಮ್ ತೆರೆಯಲು ಡಿಸಿ ಆದೇಶ- ಅತಿವೃಷ್ಟಿಯಿಂದ ಹಾನಿಗೀಡಾದ ಮನೆಗಳ ಸಮೀಕ್ಷೆ ಮಾಡಲು ಜಿಲ್ಲಾಡಳಿತದಿಂದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ**

# 48 ಗಂಟೆಗಳಲ್ಲಿ ಸರ್ವೇ ಮಾಡಿ ಪರಿಹಾರ ನೀಡಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯಾದ್ಯಂತ ಮಳೆ ಪ್ರಮಾಣ ನಿರಂತರವಾಗಿ ಸಾಗಿದ್ದು ಜನ ಜಾನುವಾರು ಜೀವ ರಕ್ಷಣೆಗೆ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು. ಹಾನಿಗೀಡಾದ ಮನೆಗಳನ್ನು 48 ಗಂಟೆಗಳಲ್ಲಿ ಸರ್ವೇ ಕಾರ್ಯ ಪೂರ್ಣಗೊಳಿಸಿ ಪರಿಹಾರ ನೀಡಲು ಕ್ರಮವಹಿಸುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ತಿಳಿಸಿದ್ದಾರೆ.



ಅವರು ಬುಧವಾರ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಮುಂಗಾರು ಮಳೆಯಿಂದ ರಾಜ್ಯದಲ್ಲಿ ಸಂಭವಿಸಿರುವ ಹಾನಿಯ ಬಗ್ಗೆ ನಡೆದ ವಿಡಿಯೋ ಸಂವಾದ ಸಭೆಯ ನಂತರ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದಾರೆ.

ಎಲ್ಲ ತಹಸೀಲ್ದಾರರ ಕಾರ್ಯಾಲಯ, ತಾಲೂಕು ಪಂಚಾಯತ್, ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಾಲಯಗಳಲ್ಲಿ 24 x 7 ಕಂಟ್ರೋಲ್ ರೂಮ್‌ಗಳನ್ನು ತೆರೆದು ಸಿಬ್ಬಂದಿಗಳನ್ನು ನೇಮಕ ಮಾಡಿ ಕಾರ್ಯ ನಿರ್ವಹಿಸಬೇಕು. ನದಿ, ಕಾಲುವೆ ಹಳ್ಳಗಳ ಪ್ರವಾಹಗಳಿಂದ ತೊಂದರೆಗೊಳಗಾಗುವ ಪ್ರದೇಶದಲ್ಲಿ ಜನ ಜಾನುವಾರುಗಳ ಸಂಚಾರ ಮಾಡದಂತೆ ಡಂಗುರ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ನೀಡಬೇಕು. ಅಗತ್ಯವಿದ್ದಲ್ಲಿ ಕಾಳಜಿ ಕೇಂದ್ರ ತೆರೆದು ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿ ಎಂದು ಡಿಸಿ ಸೂಚಿಸಿದ್ದಾರೆ.

ಜಿಲ್ಲೆಯಲ್ಲಿ ಅತಿವೃಷ್ಟಿ, ಪ್ರವಾಹದಿಂದ ಯಾವುದೇ ಅವಘಡಗಳು ನಡೆಯದಂತೆ ಮುಂಜಾಗ್ರತೆ ವಹಿಸಬೇಕು.

ಈ ನಿಟ್ಟಿನಲ್ಲಿ ಕಂದಾಯ ಇಲಾಖೆ, ಪಂಚಾಯತ್ ಇಲಾಖೆ, ಪೊಲೀಸ್ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಧಿಕಾರಿಗಳು ನಿರಂತರ ನಿಗಾವಹಿಸಬೇಕು. ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ನಿಯೋಜಿತ ಅಧಿಕಾರಿಗಳು ನಿರಂತರ ಮೇಲಾಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು, ಪರಿಸ್ಥಿತಿ ಸಮರ್ಪಕವಾಗಿ ನಿಭಾಯಿಸಬೇಕು. ಎಲ್ಲ ಅಧಿಕಾರಿ/ ಸಿಬ್ಬಂದಿಗಳು ಕೇಂದ್ರ ಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದ್ದಾರೆ.

> ಸಾರ್ವಜನಿಕರು ಸಂಚರಿಸುವ ಸ್ಥಳಗಳಲ್ಲಿ ನದಿ ಕಾಲುವೆಗಳಿಂದ ನೀರು ತುಂಬಿ ಹರಿದು ಬ್ರಿಡ್ಜ್ ಹಾಗೂ ರಸ್ತೆಗಳ ಸಂಚಾರಕ್ಕೆ ತೊಂದರೆಯಾದಲ್ಲಿ ಅಂತಹ ಸ್ಥಳಗಳಲ್ಲಿ ಬ್ಯಾರಿಕೇಡ್ ಹಾಗೂ ಎಚ್ಚರಿಕೆಯ ಫಲಕಗಳನ್ನು ಅಳವಡಿಸಬೇಕು. ಸಂಚಾರ ಮಾರ್ಗ ಬದಲಾವಣೆ ಮಾಡಬೇಕು. ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಗಟಾರ, ಕಾಲುವೆ, ಚರಂಡಿಗಳಲ್ಲಿ ತುಂಬಿರುವ ಕಸ ಪ್ಲಾಸ್ಟಿಕ್‌ಗಳನ್ನು ತೆಗೆದು ಮಳೆ ನೀರು ಸರಾಗವಾಗಿ ಮುಂದೆ ಸಾಗಲು ಕ್ರಮವಹಿಸಬೇಕು. ಅತಿವೃಷ್ಟಿ ಪ್ರವಾಹದಿಂದ ಬೆಳೆ ಹಾನಿಯಾದಲ್ಲಿ ಜಂಟಿ ಸರ್ವೆ ನಡೆಸಿ ಸಮುಚಿತ ಮಾರ್ಗದಡಿ ವರದಿ ಸಲ್ಲಿಸಬೇಕು. ಈ ಬಗ್ಗೆ ಸಂಬಂಧಿತ ಇಲಾಖೆ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಬೇಕು.
>
> **-ವೈಶಾಲಿ.ಎಂ.ಎಲ್, ಜಿಲ್ಲಾಧಿಕಾರಿಗಳು.**

### ಮಳೆ ಹಾಗೂ ಮನೆ ಹಾನಿ ವಿವರ

ಜುಲೈ 1ರಿಂದ ಈವರೆಗೆ ಜಿಲ್ಲೆಯಲ್ಲಿ 117 ಮೀ.ಮೀ. ಮಳೆಯಾಗಿದ್ದು, ವಾಡಿಕೆ ಮಳೆ 59 ಮೀ.ಮೀ ಇದ್ದು, ಶೇ.100 ರಷ್ಟು ಹೆಚ್ಚಿಗೆ ಮಳೆಯಾಗಿದೆ. ಮಳೆಯಿಂದಾಗಿ ಜಿಲ್ಲೆಯಲ್ಲಿ 121 ಮನೆಗಳು ಭಾಗಶ: ಹಾನಿಗಿಡಾಗಿವೆ. ತಾಲೂಕಾವಾರು ವಿವರ ಗದಗ-45, ಗಜೇಂದ್ರಗಡ-11, ಲಕ್ಷ್ಮೇಶ್ವರ-25, ಮುಂಡರಗಿ-5, ನರಗುಂದ-13, ರೋಣ-4, ಶಿರಹಟ್ಟಿ-18.

### ಜಲಾಶಯ ಮಟ್ಟ

ನವಿಲು ತೀರ್ಥ ಜಲಾಶಯ 37.785 ಟಿ.ಎಂ.ಸಿ. ಸಾಮರ್ಥ್ಯ ಹೊಂದಿದ್ದು, ಈವರೆಗೆ 17.220 ಟಿ.ಎಂ.ಸಿ. ನೀರು ಸಂಗ್ರಹವಾಗಿದೆ. ನೀರಿನ ಒಳ ಹರಿವು 16930 ಕ್ಯೂಸೆಕ್ಸ ಇದ್ದು ಹೊರ ಹರಿವು 194 ಕ್ಯೂಸೆಕ್ಸ ಇದೆ. ಭದ್ರಾ ಜಲಾಶಯ 71.535 ಟಿ.ಎಂ.ಸಿ. ಸಾಮರ್ಥ್ಯ ಹೊಂದಿದ್ದು ಈ ವರೆಗೆ 36.901 ಟಿ.ಎಂ.ಸಿ. ನೀರು ಸಂಗ್ರಹವಾಗಿದ್ದು ನೀರಿನ ಒಳ ಹರಿವು 28296 ಕ್ಯೂಸೆಕ್ ಇದ್ದು ಹೊರ ಹರಿವು 183 ಕ್ಯೂಸೆಕ್ಸ ಇದೆ.

**ಬಿಜೆಪಿ ರೈತ ಮೋರ್ಚಾ ವತಿಯಿಂದ ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳ ಉದ್ಘಾಟನೆ**

# ರೈತರ ಅನುಕೂಲಕ್ಕೆ ಕೇಂದ್ರದ ಸಬ್ಸಿಡಿ ನೆರವು

**■ ವಿಜಯಸಾಕ್ಷಿ ಸುದ್ದಿ, ಗದಗ**

ರೈತನಿಗೆ ಸಿಗಬೇಕಾದ ಹಲವಾರು ಯೋಜನೆಗಳು ಒಂದೇ ಕೇಂದ್ರದಲ್ಲಿ ಸಿಗುವ ಮಹತ್ವದ ಯೋಜನೆ ಇದಾಗಿದೆ. ಸ್ವಾತಂತ್ರ್ಯಾನಂತರದ 75 ವರ್ಷದಲ್ಲಿ 50 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ಆಡಳಿತ ಮಾಡಿದರೂ ಕೂಡ ರೈತರ ಬಗ್ಗೆ ಯಾವುದೇ ಯೋಜನೆಗಳನ್ನು ಜಾರಿಗೆ ತರಲಿಲ್ಲ. ಆದರೆ ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದಮೇಲೆ, ಪ್ರಧಾನಿ ನರೇಂದ್ರ ಮೋದಿಯವರು ರೈತರ ಬಗ್ಗೆ ಕಾಳಜಿ ವಹಿಸಿ, ರೈತರಿಗೆ ಅನುಕೂಲವಾಗುವ ಹಲವಾರು ಯೋಜನೆಗಳನ್ನು ನೀಡಿರುವದು ಸ್ವಾಗತಾರ್ಹ ಎಂದು ವಿಧಾನ ಪರಿಷತ್ ಸದಸ್ಯ ಎಸ್ ವ್ಹಿ ಸಂಕನೂರ ಹೇಳಿದರು.



ಭಾರತೀಯ ಜನತಾ ಪಾರ್ಟಿ ಗದಗ ವಿಧಾನಸಭಾ ಕ್ಷೇತ್ರದ ಗದಗ ನಗರ ಮಂಡಲ ರೈತ ಮೋರ್ಚಾ ವತಿಯಿಂದ 'ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಂ ಎಸ್ ಕರಿಗೌಡ್ರ ಮಾತನಾಡಿ, 2460 ರೂ. ಇದ್ದ ಯೂರಿಯಾ ಗೊಬ್ಬರ, ಕೇಂದ್ರದ ಬಿಜೆಪಿ ಸರ್ಕಾರದ ಸಬ್ಸಿಡಿ ನೆರವಿನೊಂದಿಗೆ ಈಗ ಕೇವಲ 266 ರೂ.ಗಳಿಗೆ ಲಭ್ಯವಾಗುವಂತೆ ಮಾಡಿ, ಸಾಮಾನ್ಯ ರೈತನೂ ಖರೀದಿಸುವಂತೆ ಅನುಕೂಲ ಮಾಡಿಕೊಡಲಾಗಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ರೈತ ಮೋರ್ಚಾ ಗದಗ ನಗರ ಮಂಡಲ ಅಧ್ಯಕ್ಷ ಶಂಕರ ಕರಿಬಿಷ್ಠಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಜಣ್ಣ ಕುಲಕರ್ಣಿ, ಕಾಂತೀಲಾಲ ಬನ್ಸಾಲಿ, ಅನಿಲ ಅಬ್ಬಿಗೇರಿ, ಬೂದಪ್ಪ ಹಳ್ಳಿ, ಭೀಮಸಿಂಗ್ ರಾಠೋಡ, ಪ್ರಭು ಕಲ್ಬಂಡಿ, ▸▸3ನೇ ಪುಟಕ್ಕೆ



## ಸಾಕ್ಷಿ ಸುಭಾಷಿತ

ನಾವು ನಮ್ಮಗೆಲುವುಗಳಗಿಂತಲೂ
ಸೋಲುಗಳಿಂದಲೇ ಹೆಚ್ಚು ಪಾಠ ಕಲಿಯುತ್ತೇವೆ.
ಯಾವ ತಪ್ಪೂ ಮಾಡದ
ಮನುಷ್ಯ ಏನನ್ನೂ ಕಂಡುಹಿಡಿದಿಲ್ಲ.
–ಸ್ಯಾಮ್ಯುಯೆಲ್ ಸ್ಮೈಲ್

## ಸಂಪಾದಕೀಯ

# ಅವಿಶ್ವಾಸ ಮಂಡನೆ ಪ್ರತಿಭಟನೆಯ ಭಾಗ

ಮಣಿಪುರದಲ್ಲಿ ನಡೆದ ಹಿಂಸಾಚಾರದ ಕುರಿತಾಗಿ ಸಂಸತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಮೌನ ಮುರಿಯುತ್ತಿಲ್ಲ ಎಂದು ವಿಪಕ್ಷ ನಾಯಕರು ಆರೋಪಿಸುತ್ತಿದ್ದಾರೆ. ಸಂಸತ್ ಅಧಿವೇಶನದಲ್ಲಿ ಕಪ್ಪು ಬಟ್ಟೆ ಧರಿಸಿ ಸರಕಾರದ ವಿರುದ್ಧ ಪ್ರತಿಪಕ್ಷ ನಾಯಕರು ಕೋಲಾಹಲ ಸೃಷ್ಟಿಸುತ್ತಿದ್ದಾರೆ. ಪ್ರತಿಪಕ್ಷಗಳ ಸದ್ದು ಗದ್ದಲಕ್ಕೆ ಕಲಾಪ ಮುಂದೂಡಲ್ಪಟ್ಟಿದೆ.

ಆದರೆ ಪ್ರಧಾನಿ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿರುವ ಪ್ರತಿಪಕ್ಷ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆಗೆ ಮುಂದಾಗಿದ್ದಾರೆ. ಸ್ಪೀಕರ್ ಗೆ ಪತ್ರವನ್ನು ಕೊಟ್ಟಿದ್ದಾರೆ. ಸ್ಪೀಕರ್ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದು, ಶೀಘ್ರವೇ ಅವಿಶ್ವಾಸ ಮಂಡನೆ ಚರ್ಚೆಗೆ ಬರಲಿದೆ.

ಸಂಸತ್ತಿನಲ್ಲಿ ಸಂಖ್ಯಾಬಲ ನೋಡಿದರೆ ಎನ್ ಡಿಎ ಮಿತ್ರಪಕ್ಷ ಬಹುದೊಡ್ಡ ಸಂಖ್ಯೆಯಲ್ಲಿದೆ. ಕಾಂಗ್ರೆಸ್ ಸಹಿತ ಪ್ರತಿಪಕ್ಷಗಳು ಏನೇ ಮಾಡಿದರೂ ಪ್ರಧಾನಿಯನ್ನು ಕೆಳಗಿಳಿಸಲು ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಆದರೂ ಕಾಂಗ್ರೆಸ್ ಅವಿಸ್ವಾಸ ಗೊತ್ತುವಳಿ ಮಂಡನೆಗೆ ಮುಂದಾಗಿರುವುದು ಪ್ರತಿಭಟನೆಯನ್ನು ದಾಖಲಿಸುವುದಕ್ಕೆ ಮಾತ್ರ.

ಪ್ರಧಾನಿ ವಿರುದ್ಧ ಪ್ರತಿಭಟನೆಗೆ ಹಲವಾರು ದಾರಿಗಳಿದ್ದರೂ ಕಾಂಗ್ರೆಸ್ ಅವಿಶ್ವಾಸಕ್ಕೆ ಮುಂದಾಗಿದೆ. ಇದರಿಂದ ಯಶ ಸಿಗುವುದಿಲ್ಲ. ಆದರೆ ದೇಶಾದ್ಯಂತ ಚರ್ಚೆ ಹುಟ್ಟುಹಾಕಲು ಸಾಧ್ಯವಿದೆ ಎನ್ನುವ ಸಂಗತಿಯನ್ನು ಕಾಂಗ್ರೆಸ್ ಅರ್ಥ ಮಾಡಿಕೊಂಡಿದೆ. ಅದರಿಂದ ಭವಿಷ್ಯದಲ್ಲಿ ರಾಜಕೀಯ ಲಾಭ ಸಿಗುವುದು ನಿಶ್ಚಿತ ಎನ್ನುವ ಲೆಕ್ಕಾಚಾರವೂ ಅದರಲ್ಲಿ ಅಡಗಿದೆ. ಒಂದಷ್ಟು ರಾಜಕೀಯ ಲಾಭ ಸಿಕ್ಕರೂ ಅಚ್ಚರಿಪಡಬೇಕಿಲ್ಲ.

ಸಂಸತ್ತಿನಲ್ಲಿ ಪ್ರಧಾನಿ ಮಣಿಪುರದ ಹಿಂಸಾಚಾರದ ಕುರಿತಾಗಿ ಮಾತನಾಡಬೇಕು ಎಂದು ಪ್ರತಿಪಕ್ಷಗಳು ಪಟ್ಟು ಹಿಡಿಯುವ ಬದಲು, ಮಣಿಪುರದ ಹಿಂಸಾಚಾರದ ಕುರಿತಾಗಿ ಚರ್ಚೆ ಆಗಬೇಕು ಎನ್ನುವ ಕೂಗು ದೊಡ್ಡಮಟ್ಟದಲ್ಲಿ ಮೊಳಗಿದ್ದರೆ ಪ್ರತಿಪಕ್ಷಗಳ ಹೋರಾಟಕ್ಕೆ ಹೆಚ್ಚು ಅರ್ಥ ಬರುತ್ತಿತ್ತು. ಇನ್ನು ಪ್ರಧಾನಿ ನರೇಂದ್ರ ಮೋದಿ ಮಣಿಪುರದ ಹಿಂಸಾಚಾರದ ವಿಚಾರವಾಗಿ ತಡವಾಗಿ ನೀಡಿದ ಹೇಳಿಕೆ ಸಾಕಷ್ಟು ಟೀಕೆಗೆ ಗುರಿಯಾಗಿತ್ತು. ಅದರಲ್ಲೂ ವಿದೇಶ ಮಾಧ್ಯಮಗಳಲ್ಲಿ ಪ್ರಧಾನಿ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ ಎನ್ನುವ ಅರ್ಥದಲ್ಲಿ ಸುದ್ದಿ ಪ್ರಕಟಿಸಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಮಾನ ಹರಾಜು ಆಗುವಂತಾಗಿದೆ.

ಮಣಿಪುರದಲ್ಲಿ ಬುಡಕಟ್ಟು ಮಹಿಳೆಯರ ಮೇಲೆ ನಡೆದ ಹಿಂಸಾಚಾರ ನಿಯಂತ್ರಿಸುವಲ್ಲಿ ಅಲ್ಲಿನ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ. ಸಾವಿರಾರು ಜನ ಪುರುಷರು ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡುವಂಥ ಹೇಯ ಕೃತ್ಯ ನಡೆದರೂ ಸರಕಾರ ಗಂಭೀರ ಕ್ರಮ ಕೈಗೊಳ್ಳದಿರುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಇಂಥ ಸಂದರ್ಭದಲ್ಲಿ ಪ್ರಧಾನಿ ಆದಿಯಾಗಿ ಪ್ರತಿಯೊಬ್ಬರೂ ಆ ಘಟನೆಯನ್ನು ಶಬ್ಧಗಳಲ್ಲಿ ಖಂಡಿಸುವ ಜೊತೆಗೆ ಕಠಿಣ ಕ್ರಮ ಕೈಗೊಳ್ಳಬೇಕು. ಆ ಕುರಿತು ಸಂಸತ್ತಿನಲ್ಲಿ ಚರ್ಚೆ ಅಗತ್ಯ ಮತ್ತು ಅನಿವಾರ್ಯ ಎನ್ನುವುದು ಆಡಳಿತ ಪಕ್ಷಕ್ಕೆ ಅರ್ಥವಾಗಬೇಕು.

### ಪ್ರಕೃತಿಯೆದುರು ವಿನಯದಿಂದಿದ್ದು, ಈ ಮಳೆಗಾಲವನ್ನು ಆಸ್ವಾದಿಸೋಣ

# ವರ್ಷಧಾರೆಯ ನಡುವೆ ಮುನ್ನೆಚ್ಚರಿಕೆಯಿರಲಿ



ಈ ಮಳೆಗಾಲ ಎಂದರೆ ಮೈ-ಮನಗಳಿಗೆಲ್ಲ ರೋಮಾಂಚನ, ಏನೋ ಒಂದು ರೀತಿಯ ಖುಷಿ. ಮಕ್ಕಳಿಂದ ಹಿಡಿದು, ದೊಡ್ಡವರವರೆಗೆ ಮಳೆ ಬೀಳುವಾಗ ವರ್ಣಿಸಲದಳ ಅನುಭವ ನೀಡುತ್ತದೆ. ಈ ಪ್ರಕೃತಿ ಒಂದು ರೀತಿ ನವ ವಧುವಿನಂತೆ ಸಿಂಗಾರಗೊಂಡಿರುತ್ತದೆ. ಮೋಡ ಕವಿದ, ಹಿತಕರವಾದ ವಾತಾವರಣ, ದೂರದಲ್ಲೆಲ್ಲೋ ಕಾಣುವ ಕಾಮನಬಿಲ್ಲು, ಒಮ್ಮೊಮ್ಮೆ ತುಂತುರು ಮಳೆ, ಒಮ್ಮೊಮ್ಮೆ ಜಡಿ ಮಳೆ.... ಹೀಗೆ ಮಳೆಯ ವೈಭವ ಆಕಾಶ-ಮುಗಿಲನ್ನು ಒಂದು ಮಾಡುತ್ತದೆ.

ಸಿನಿಮಾಗಳಲ್ಲಿಯ ಅನೇಕ ಮಳೆಯ ಹಾಡುಗಳು ಒಮ್ಮೆಲೇ ನೆನಪಾಗುತ್ತವೆ. ನಾವು ಬಾಲ್ಯದಲ್ಲಿ ಇದ್ದಾಗ ಮಳೆಯಲ್ಲಿ ಆಟವಾಡಿದ ಪರಿಯು ನೆನಪಾಗುತ್ತದೆ. ಹಿತಕರವಾದ ಮಳೆಯೊಂದಿಗೆ ನಾವು ದನ-ಕರುಗಳನ್ನು ಹೊಲ-ಗದ್ದೆಗಳಿಗೆ ಮೇಯಿಸಲು ಹೋದಾಗ ಮಳೆಯಿಂದ ರಕ್ಷಣೆಗೆ ಗೊರಗು, ಗೋಣಿಚೀಲ, ಪ್ಲಾಸ್ಟಿಕ್ ಚೀಲ, ಛತ್ರಿ, ಎಲ್ಲಾ ಪರಿಕರಗಳಿದ್ದರೂ ನೆನೆದುಕೊಂಡೇ ಮನೆಗೆ ಸೇರುತ್ತಿದ್ದೆವು. ಜೊತೆಗೆ ದೊಡ್ಡವರ ಹತ್ತಿರ ಬೈಸಿಕೊಳ್ಳುವುದೂ ಮಾಮೂಲಾಗಿತ್ತು.

ರಾಜ್ಯಾದ್ಯಂತ ಈಗ ಮುಂಗಾರು ಮಳೆ ಚುರುಕುಗೊಂಡಿದೆ. ಮಳೆಯಿಂದ ಆತಂಕಗೊಂಡಿದ್ದ ನಮ್ಮ ರೈತ ನೆಮ್ಮದಿಯಾಗಿ ನಿಟ್ಟುಸಿರು ಬಿಟ್ಟಿದ್ದಾನೆ. ಏಕೆಂದರೆ ಇದೇ ಸಮಯದಲ್ಲಿ ಕಳೆದ ವರ್ಷ ಹೆಚ್ಚು ಮಳೆಯಾಗಿ ಎಲ್ಲಾ ನದಿಗಳು ತುಂಬಿ ಹರಿಯುತ್ತಿದ್ದವು. ಮತ್ತೊಂದೆಡೆ ಪ್ರವಾಹದಿಂದ ಹಲವರ ಜೀವನ ತತ್ತರಿಸಿದೆ. ಸಹಜ ಮಳೆ ಹೆಚ್ಚಳದಿಂದಾಗಿ ನದಿಗಳಿಗೆ ಹರಿದು ಬರುವ ನೀರಿನ ಮಟ್ಟವು ಕೂಡ ತೀವ್ರ ರೀತಿಯಲ್ಲಿ ಹೆಚ್ಚಾಗಿರುವುದರಿಂದ ಪ್ರವಾಹದ ರೂಪದಲ್ಲಿ ನದಿಗಳಿಗೆ ನೀರನ್ನು ಬಿಡುವುದು ಅನಿವಾರ್ಯವಾಗಿದೆ. ಇಂತಹ ಸಂದರ್ಭದಲ್ಲಿ ಆಡಳಿತ ಮುಂಚಿತವಾಗಿ ಮುನ್ನೆಚ್ಚರಿಕೆ ಮಾಹಿತಿಯನ್ನು ನೀಡಿದರೂ ಕೂಡ ಅನಕ್ಷರಸ್ಥ ಅಕ್ಕ-ಪಕ್ಕದ ಗ್ರಾಮಸ್ಥರು, ರೈತರು ನದಿಗೆ ನೀರು ಬಿಟ್ಟಿರುವುದನ್ನು ಗಮನಿಸದೆ ತಮ್ಮ ಹೊಲ-ಗದ್ದೆಗಳಿಗೆ ಕೆಲಸಕ್ಕೆ ಹೋಗುವ ಸಂದರ್ಭದಲ್ಲಿ ಅನೇಕ ದುರಂತಗಳು ಸಂಭವಿಸುತ್ತವೆ.

ನೀರಿನ ಹತ್ತಿರಕ್ಕೆ ಹೋಗುವುದು, ಸೆಲ್ಫಿ ತೆಗೆದುಕೊಳ್ಳುವುದು, ಸೇತುವೆ ಮೇಲೆ ನೀರು ಹರಿಯುತ್ತಿದ್ದಾಗ ಯಾರೂ ಇಲ್ಲದ ಸಮಯದಲ್ಲಿ ಅಂತಹ ನೀರಿನ ಮೂಲಕ ಹಾಯ್ದುಕೊಂಡು ಹೋಗುವುದು, ವಾಹನ ಓಡಿಸುವುದು, ಈಜು ಹೊಡೆಯುವುದು ಇತ್ಯಾದಿ ಮಂಗಾಟಗಳನ್ನಾಡುತ್ತಾರೆ.

ಇದರಿಂದಾಗಿ ಈಗಾಗಲೇ ಅನೇಕ ದುರಂತಗಳು ಸಂಭವಿಸಿವೆ. ಅವು ಪುನರಾವರ್ತನೆಯಾಗದಂತೆ ಹಿರಿಯರು, ಯುವಜನತೆ, ಅಕ್ಕಪಕ್ಕದ ರೈತರು, ಗ್ರಾಮಸ್ಥರು ಎಚ್ಚರಿಕೆವಹಿಸಬೇಕು.

ಈ ಮಳೆಗಾಲದ ಸಂದರ್ಭದಲ್ಲಿ ಮಿಂಚು-ಗುಡುಗು ಸಮೇತ ಮಳೆ ಬರುವಾಗ, ನಾವು ರಸ್ತೆಯಲ್ಲಿ ವಾಹನ ಚಾಲನೆ ಮಾಡುವಾಗ ಮರಗಳು ಬೀಳಬಹುದು. ವಿದ್ಯುತ್ ತಂತಿಗಳು ಮರದ ಮೂಲಕ ಶಾಕ್ ನೀಡಬಹುದು. ಇದರ ಬಗ್ಗೆ ನಿಗಾ ಇಡಬೇಕು. ಜೊತೆಗೆ ನಗರ ಪ್ರದೇಶಗಳಲ್ಲಿ ಚರಂಡಿಯ ಮೂಲಕ ಮಳೆಯ ನೀರು ರಸ್ತೆಯ ಮೇಲೆಲ್ಲಾ ಹರಿಯುವುದರಿಂದ ಮ್ಯಾನ್‌ಹೋಲ್, ಗುಂಡಿಗಳ ಇರುವಿಕೆ ಅರಿವಿಗೆ ಬಾರದು. ಇಂಥವುಗಳ ಬಗ್ಗೆಯೂ ಗಮನ ಅಗತ್ಯ.

ಮಳೆಗಾಲದ ಸಮಯದಲ್ಲಿ ನಾವು ಪ್ರವಾಸ ಮಾಡುವುದನ್ನು ಕಡ್ಡಾಯವಾಗಿ ನಿಲ್ಲಿಸೋಣ.

ಒಂದು ವೇಳೆ ಹೋದರೆ ಪ್ರವಾಸದಲ್ಲಿ ಬಹಳ ಎಚ್ಚರಿಕೆಯಿಂದ ಕಾರ್ಯಕ್ರಮಗಳನ್ನು ಆಯೋಜಿಸಿ, ನೀರಿನ ಸ್ಥಳ ಇನ್ನಿತರ ಕಡೆ ಎಚ್ಚರಿಕೆ ವಹಿಸಬೇಕು. ಪಾಲಕರಲ್ಲಿ ಒಂದು ಮನವಿಯೆಂದರೆ, ತಮ್ಮ ಸ್ನೇಹಿತರ ಜೊತೆ ಪ್ರವಾಸದ ನೆಪದಲ್ಲಿ ಅಪಾಯಕಾರಿ ಸ್ಥಳಗಳಿಗೆ ಹೋಗಿ ದುರಂತ ಸಂಭವಿಸಿರುವ ಅನೇಕ ಉದಾಹರಣೆಗಳು ಈಗಾಗಲೇ ನಡೆದಿವೆ.

ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಮಕ್ಕಳ ಜೊತೆಯಲ್ಲಿ ಪೋಷಕರೂ ಇದ್ದರೆ ಒಳ್ಳೆಯದು. ಜಲಪಾತಗಳ ಸೌಂದರ್ಯವನ್ನು ದೂರದಿಂದಲೇ ನೋಡಿ ಸಂಭ್ರಮಿಸೋಣ.

ಹಲವು ಕಡೆ ನಾಲೆಗಳು ಒಡೆಯುವ ಸಂದರ್ಭವೂ ಕೂಡ ಒದಗಬಹುದು. ಜೊತೆಗೆ ಹಂಚಿನ ಮನೆಗಳು, ಮಣ್ಣಿನ ಮನೆಗಳು ಕುಸಿಯಬಹುದು. ಮನೆಯೊಳಗೆ ನೀರು ಪ್ರವೇಶಿಸಿದಂತೆ ಎಚ್ಚರವಹಿಸಬೇಕು. ಕಾಡಂಚಿನ ಗ್ರಾಮಗಳಲ್ಲಿ, ಗುಡ್ಡಗಾಡಿನ ಪ್ರದೇಶದಲ್ಲಿ ಅಥವಾ ಹಳ್ಳಿಗಳಲ್ಲಿ ಶಾಲಾ ಮಕ್ಕಳು ಒಂದು ಕಡೆಯಿಂದ ಮತ್ತೊಂದು ಊರಿನ ಶಾಲೆಗೆ ಹೋಗುವಾಗ ಅವರು ಮಳೆಯಲ್ಲಿ ನೆನೆಯದಂತೆ ನೋಡಿಕೊಳ್ಳಬೇಕು.

ಮಳೆಗಾಲದ ವಾತಾವರಣದಲ್ಲಿ ಅನೇಕ ರೋಗರುಜಿನಗಳೂ ಸಾಮಾನ್ಯ. ನೀರು ಕೂಡ ಕಲುಷಿತ ವಾಗಿರುತ್ತದೆ. ಕುದಿಸಿ ಆರಿಸಿದ ನೀರನ್ನು ಕುಡಿಯುವುದು ಹೆಚ್ಚು ಸೂಕ್ತ. ಪ್ರಕೃತಿ ವೈಪರಿತ್ಯದಿಂದಾಗಿ ರೈತರು ಬೆಳೆಯುವ ಬೆಳೆಗಳ ಮೇಲೂ ತೀವ್ರ ಪರಿಣಾಮ ಬೀರಿ, ಆರ್ಥಿಕ ನಷ್ಟ ಉಂಟು ಮಾಡುತ್ತಿದೆ. ಅದರಿಂದಾಗಿ ರೈತರು ಕೂಡ ಬದಲಿ ವ್ಯವಸ್ಥೆಗಳನ್ನು ಈ ನಿಟ್ಟಿನಲ್ಲಿ ಕೈಗೊಳ್ಳಬೇಕು.

ಈ ಎಲ್ಲ ಕಾರಣಗಳಿಂದ, ಮತ್ತೊಮ್ಮೆ ಎಲ್ಲರಲ್ಲೂ ಮನವಿಯೆಂದರೆ, ಈ ಮಳೆಗಾಲದ ಸಂದರ್ಭದಲ್ಲಿ ನಾವು ಅಕ್ಕಪಕ್ಕದವರನ್ನು ಕೂಡ ಜಾಗೃತಗೊಳಿಸಿ, ನಮ್ಮೊಂದಿಗೆ ಜಾನುವಾರುಗಳ ಬಗ್ಗೆಯೂ ಗಮನ ಹರಿಸಿ ಈ ಮಳೆಗಾಲದ ವಾತಾವರಣವನ್ನು ಅನುಭವಿಸೋಣ.



– ಕಾಳಿಹುಂಡಿ ಶಿವಕುಮಾರ್,
ಮೈಸೂರು.

### ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಅಭಿಮತ

# ಪ್ರತಿನಿತ್ಯ ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪತ್ರಕರ್ತರು ಉತ್ತಮ ರೀತಿಯಲ್ಲಿ ತಮ್ಮ ವೃತ್ತಿಯನ್ನು ನಡೆಸಿಕೊಂಡು ಬರುತ್ತಾರೆ. ಪತ್ರಕರ್ತರು ಹಾಗೂ ನಾವು ಸೇರಿ ಸಮಾಜದ ಒಳಿತಿಗೆ ಅಭಿವೃದ್ಧಿಯ ಕೆಲಸ ಮಾಡೋಣ. ಮುಂಬರುವ ದಿನಗಳಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಅನುದಾನ ಕಲ್ಪಿಸಲಾಗುವುದು ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕ ಹಾಗೂ ಜಗದ್ಗುರು ಅನ್ನದಾನೀಶ್ವರ ಶಿಕ್ಷಣ ಮಹಾವಿದ್ಯಾಲಯ ಸಂಯುಕ್ತ ಆಶ್ರಯದಲ್ಲಿ ಬುಧವಾರ ಅಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ವಿದ್ಯಾರ್ಥಿಗಳೆಲ್ಲರೂ ಪ್ರತಿದಿನ ದಿನಪತ್ರಿಕೆ ಓದುವ ಹವ್ಯಾಸ ಹೊಂದಬೇಕು. ದಿನಪತ್ರಿಕೆ ಓದುವುದರಿಂದ ಕೆಎಎಸ್, ಐಪಿಎಸ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗೂ ಸಹಕಾರಿಯಾಗಲಿದೆ ಎಂದರು.

ಬಿಜೆಪಿ ಮುಂಡರಗಿ ಮಂಡಲ ಅಧ್ಯಕ್ಷ ಹೇಮಗಿರೀಶ ಹಾವಿನಾಳ ಮಾತನಾಡಿ, ಪತ್ರಿಕೆಗಳು ಜೀವನಕ್ಕೆ ಮಾರ್ಗದರ್ಶನ ಮಾಡುತ್ತವೆ. ಪ್ರಚಲಿತ ವಿದ್ಯಮಾನಗಳನ್ನು ತಿಳಿಸುವ ಅತ್ಯುತ್ತಮ ಸಾಧನ. ಜೀವನದ ಒಳಿತಿಗೆ ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಿ ಡಿ ಮೋರನಾಳ ಮಾತನಾಡಿ, ಸಮಾಜಕ್ಕೆ, ಜೀವನ ವ್ಯವಸ್ಥೆಗೆ ಪತ್ರಿಕೆ ಬಹಳ ಮುಖ್ಯ. ಪತ್ರಕರ್ತರಿಗೆ ಬೇಕಾಗಿರುವ ಸೌಲಭ್ಯ ದೊರಕಿಸಿಕೊಡುವ ಕೆಲಸವಾಗಬೇಕು. ಪತ್ರಕರ್ತರು ಆರ್ಥಿಕವಾಗಿ ಮುಂದೆ ಬರಲು ಸರ್ಕಾರ ಅನುಕೂಲತೆ ಕಲ್ಪಿಸಬೇಕು ಎಂದರು.

ಪುರಸಭೆ ಸದಸ್ಯ ಲಿಂಗರಾಜಗೌಡ ಪಾಟೀಲ ಮಾತನಾಡಿ, ಪತ್ರಿಕೆಗಳು ಸಮಾಜದ ಕೈಗನ್ನಡಿಯಾಗಿ, ಸಮಾಜದಲ್ಲಿನ ಸಮಸ್ಯೆಗಳನ್ನು ಬಿತ್ತರಿಸಿ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡುತ್ತವೆ. ಹಗಲು-ರಾತ್ರಿಯನ್ನದೆ ಕೆಲಸ ಮಾಡುವ ಪತ್ರಕರ್ತರಿಗೆ ನೆರವು ನೀಡುವ ಕೆಲಸ ಆಗಬೇಕು ಎಂದರು.

ಸಂಘದ ಜಿಲ್ಲಾಧ್ಯಕ್ಷ ರಾಜು ಹೆಬ್ಬಳ್ಳಿ ಮಾತನಾಡಿ, ಪತ್ರಕರ್ತರಿಗೆ ಸಾಮಾಜಿಕ ಜವಾಬ್ದಾರಿ ಇರುತ್ತದೆ. ಸಮಾಜಕ್ಕೆ ಏನಾದರೂ ಕೊಡುಗೆ ನೀಡುವಂತಾಗಬೇಕು. ಸಮಾಜದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡೋಣ ಎಂದರು.

> ಪತ್ರಿಕೆಗಳಲ್ಲಿ ಎಲ್ಲ ವಿಷಯಗಳನ್ನು ಓದಿ ಬದಲಾವಣೆ ತಂದುಕೊಳ್ಳಬೇಕು. ತಾಲೂಕಿನ ಪತ್ರಕರ್ತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಶ್ರೀಮಠದಿಂದ ಒಂದು ಲಕ್ಷ ರೂಪಾಯಿಯನ್ನು ಪತ್ರಕರ್ತರ ಸಂಘಕ್ಕಾಗಿ ಠೇವಣಿ ಮಾಡಲಾಗುವುದು. ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಓರ್ವ ಕ್ರಿಯಾಶೀಲ ಪತ್ರಕರ್ತರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗವುದು. ಒಂದೆರಡು ದಿನದಲ್ಲಿ ಹಣ ಠೇವಣೆ ಇಡಲಾಗುತ್ತದೆ.
> – ಡಾ.ಅನ್ನದಾನೀಶ್ವರ ಮಹಾಸ್ವಾಮೀಜಿ.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಘಟಕದ ಅಧ್ಯಕ್ಷ ಹು.ಬಾ ವಡ್ಡಟ್ಟಿ ಮಾತನಾಡಿದರು. ಪತ್ರಕರ್ತರಾದ ಸಂತೋಷ ಮುರಡಿ, ಸಿ.ಕೆ ಗಣಪ್ಪನವರ, ಶರಣು ಸೊಲಗಿ, ಕವಿ ಬಂಕಾಪುರ, ಶಿವು ಹೊಂಬಳಗಟ್ಟಿ, ಮಂಜುನಾಥ ಜಾಗಟಗೇರಿ, ಲಕ್ಷ್ಮಣ ದೊಡ್ಡಮನಿ, ರಿಯಾಜ್ ದೊಡ್ಡಮನಿ, ವಿಜಯ ಸೊರಟೂರ ಮುಂತಾದವರಿದ್ದರು.

ಕಾಶೀನಾಥ ಬಿಳಿಮಗ್ಗದ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ಸಿ.ಎಸ್ ಅರಸನಾಳ ಸ್ವಾಗತಿಸಿದರು. ಪ್ರಶಿಕ್ಷಣಾರ್ಥಿಗಳಾದ ಅನ್ನಪೂರ್ಣ ಮೂಲಿಮನಿ ಹಾಗೂ ಶಿವಕುಮಾರ ಹಳ್ಳಿಗುಡಿ ಕಾರ್ಯಕ್ರಮ ನಿರೂಪಿಸಿದರು. ಎಂ.ಡಿ ಪಾಟೀಲ ವಂದಿಸಿದರು.



ತುಂಗಭದ್ರ ನದಿ ಭರ್ತಿಯಾದ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಶಾಸಕ ಡಾ.ಚಂದ್ರು ಲಮಾಣಿ ಬುಧವಾರ ಬಾಗಿನ ಅರ್ಪಿಸಿದರು. ಕ್ಷೇತ್ರದ ಸಂಪೂರ್ಣ ನೀರಾವರಿ ಯೋಜನೆಗೆ ಒತ್ತು ನೀಡಲಾಗುವುದು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಲಾಗುವುದೆಂದರು. ತಾಲೂಕಾ ಬಿಜೆಪಿ ಮಂಡಳದ ಅಧ್ಯಕ್ಷ ಹೇಮಗಿರೇಶ ಹಾವಿನಾಳ, ಲಿಂಗರಾಜಗೌಡ ಪಾಟೀಲ, ಶ್ರೀನಿವಾಸ ಅಬ್ಬಿಗೇರಿ, ಬಸವರಾಜ ಬಿಳಿಮಗ್ಗದ, ದೇವಪ್ಪ ಕಂಬಳಿ, ವೆಂಕಟೇಶ ಹಾರೋಗೇರಿ ಮುಂತಾದವರಿದ್ದರು.

## ಜಿಯೋ ಬ್ಲ್ಯಾಕ್‌ರಾಕ್; ಹೊಸ ಮ್ಯೂಚುವಲ್ ಫಂಡ್ ಕಂಪನಿ ಆರಂಭಿಸಿದ ಅಂಬಾನಿ

■ವಿಜಯಸಾಕ್ಷಿ ಸುದ್ದಿ, ಮುಂಬೈ

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನಿಂದ ವಿಭಜನೆಗೊಂಡ, ಹಣಕಾಸು ಸಾಲ ನೀಡುವ ಕಂಪನಿ ಜಿಯೋ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್ ಮತ್ತು ವಿಶ್ವದ ಅತಿದೊಡ್ಡ ಅಸೆಟ್ ಮ್ಯಾನೇಜಮೆಂಟ್ ಕಂಪನಿ ಬ್ಲ್ಯಾಕ್‌ರಾಕ್ ಎರಡೂ ಒಟ್ಟಾಗಿ ಸೇರಿ 300 ಮಿಲಿಯನ್ ಡಾಲರ್ ಸಂಯೋಜಿತ ಹೂಡಿಕೆಯೊಂದಿಗೆ ಹೊಸ ಅಸೆಟ್ ಮ್ಯಾನೇಜಮೆಂಟ್ ಕಂಪನಿ ಅಥವಾ ಮ್ಯೂಚುವಲ್ ಫಂಡ್ ಕಂಪನಿ ಜಿಯೋ ಬ್ಲ್ಯಾಕ್‌ರಾಕ್ ಅನ್ನು ಆರಂಭಿಸಿವೆ.

ಭಾರತದಲ್ಲಿ ಲಕ್ಷಾಂತರ ಹೂಡಿಕೆದಾರರಿಗೆ ತಂತ್ರಜ್ಞಾನ ಆಧರಿತ ಕೈಗೆಟುಕುವ, ನವೀನ ಹೂಡಿಕೆ ವಿಧಾನಗಳನ್ನು ಜಿಯೋ ಬ್ಲ್ಯಾಕ್‌ರಾಕ್ ನೀಡಲಿದೆ ಎಂದು ಬ್ಲ್ಯಾಕ್‌ರಾಕ್ ಮತ್ತು ಜಿಯೋ ಫೈನಾನ್ಶಿಯಲ್ ನ ಜಂಟಿ ಉದ್ಯಮವಾಗಿರುವ ಜಿಯೋ ಬ್ಲ್ಯಾಕ್‌ರಾಕ್‌ನ ಹೇಳಿಕೆ ತಿಳಿಸಿದೆ.

ಇಬ್ಬರೂ ಪಾಲುದಾರರು ಜಂಟಿ ಉದ್ಯಮದಲ್ಲಿ ತಲಾ 150 ಮಿಲಿಯನ್ ಡಾಲರ್ ಹೂಡಿಕೆ ಮಾಡಲು ಯೋಜಿಸಿದ್ದಾರೆ.

## ಸ್ಲಂ ಜನರ, ವಸತಿರಹಿತರ ಹೋರಾಟಕ್ಕೆ ಸಜ್ಜಾಗಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಸ್ಲಂ ಸಮಿತಿಯು ಕಳೆದ 15 ವರ್ಷಗಳಿಂದ ಸ್ಲಂ ಜನರ ವಸತಿ, ಹಕ್ಕುಪತ್ರ ಮತ್ತು ಮೂಲಭೂತ ಸೌಲಭ್ಯಕ್ಕೆ ಆಗ್ರಹಿಸಿ ನಿರಂತರ ಹೋರಾಟಗಳನ್ನು ನಡೆಸುತ್ತ ಬಂದಿದ್ದರೂ, ನಿರ್ಲಕ್ಷಿಸಲಾಗುತ್ತಿದೆ. ಹೀಗಾಗಿ, ಸಮಿತಿಯ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲು ಉದ್ದೇಶಿಸಲಾಗಿದೆ ಎಂದು ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಂಚಾಲಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ ಆರ್ ಮಾನ್ವಿ ಹೇಳಿದರು.

ನಗರದ ಪ್ರವಾಸಿ ವಸತಿಗೃಹದಲ್ಲಿ ಸಮಿತಿಯ ಪದಾಧಿಕಾರಿಗಳ ಹಾಗೂ ಮುಖಂಡರ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಗದಗ-ಬೆಟಗೇರಿ ನಗರದ ಸ್ಲಂ ನಿವಾಸಿಗಳು ತಮ್ಮ ಪ್ರದೇಶದಲ್ಲಿ ದಶಕಗಳಿಂದ ವಸತಿ ಮತ್ತು ಸರಿಯಾದ ನಾಗರಿಕ ಸೌಲಭ್ಯಗಳಿಲ್ಲದೆ ನರಕಯಾತನೆ ಅನುಭವಿಸುತ್ತಿದ್ದಾರೆ. ಸರ್ಕಾರಗಳು ಜಾರಿಗೆ ತಂದಿರುವ ವಸತಿ ಯೋಜನೆಗಳು ಉಳ್ಳವರ ಪಾಲಾಗುತ್ತಿದ್ದು, ಅರ್ಹರು ಅನೇಕ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ನಮ್ಮನು ಆಳುವ ಸರ್ಕಾಗಳು ಮತ್ತು ಜನಪ್ರತಿನಿಧಿಗಳು ಇಂತಹ ಅವ್ಯವಸ್ಥೆಗಳನ್ನು ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗಿದೆ. ಈ ಉದ್ದೇಶಕ್ಕಾಗಿ, ಸ್ಲಂ ಜನರ ಹೋರಾಟಗಳಿಗೆ ಎಲ್ಲರೂ ಕೈಜೊಡಿಸಬೇಕೆಂದು ಹೇಳಿದರು.



ಮಹಿಳಾ ಘಟಕದ ಸಂಚಾಲಕಿ ಮೆಹರುನಿಸಾ ಢಾಲಾಯತ, ಮುಖಂಡರಾದ ಶಿವಾನಂದ ಶಿಗ್ಲಿ, ದಾವಲಬಿ ಕೌತಾಳ, ಮೆಹರುನಿಸಾ ಡಂಬಳ, ಮಂಜುನಾಥ ಶ್ರೀಗಿರಿ, ಜಾಫರ ಮಲಬಾರ, ಶಿವಪ್ಪ ರೋಣ, ಮಕ್ತುಮಸಾಬ ಮುಲ್ಲಾನವರ, ದುರ್ಗಪ್ಪ ಮಣಿವಡ್ಡರ, ನೂರಾರು ಸ್ಲಂ ನಿವಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಮಿತಿಯ ಉಪಾಧ್ಯಕ್ಷ ರವಿಕುಮಾರ ಬೆಳಮಕರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯದರ್ಶಿ ಅಶೋಕ ಕುಸಬಿ ಕಾರ್ಯಕ್ರಮ ನಿರೂಪಿಸಿದರು. ಮೌಲಾಸಾಬ ಗಚ್ಚಿ ವಂದಿಸಿದರು.

### ನಿರಂತರ ಸುರಿಯುತ್ತಿರುವ ಸೋನೆ ಮಳೆಯ ನಡುವೆಯೂ ಹಿಂದೂ-ಮುಸ್ಲಿಂರ ಭಾವೈಕ್ಯತೆಯ ಹಬ್ಬ ಆಚರಣೆ

# ಎಲ್ಲೆಲ್ಲೂ ಮೊಹರಂ ವೇಷಧಾರಿಗಳ ಅಬ್ಬರ!



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ


ಅರೆ....ರೆರೆ ಇದೇನಿದು ಹುಲಿಗಳೇ... ಎಂದು ಹುಬ್ಬೇರಿಸಬೇಡಿ. ಹಸೇನ-ಹುಸೇನರು ವೀರ ಸ್ವರ್ಗವನ್ನಪ್ಪಿದ ಆಚರಣೆಯ ಹಿನ್ನಲೆಯಲ್ಲಿ ಆಚರಿಸುವ ಮೊಹರಂ ಹಬ್ಬದ ಸಂದರ್ಭದಲ್ಲಿ ನಂಬಿಕೆಯಂತೆ ಪ್ರಾಯಶ್ಚಿತ್ತ ಮತ್ತು ಹರಕೆಗಾಗಿ ಹುಲಿ ವೇಷ ಧರಿಸಿ ಹಬ್ಬಕ್ಕೆ ಮೆರಗು ತರುತ್ತಾರೆ. ಹಿಂದೂ ಮುಸ್ಲಿಂರೆಲ್ಲರೂ ಹುಲಿ ವೇಷ ಮೈಮೇಲೆ ಬರೆಸಿಕೊಂಡು ಹುಲಿಗೆ ಭಾರಿಸುತ್ತಾ ನಾದಕ್ಕೆ ತಕ್ಕಂತೆ ಹುಲಿ ಕುಣಿತ ಮತ್ತು ಅಳ್ಳೊಳ್ಳಿ ಬವ್ವಾ ವೇಷದೊಂದಿಗೆ ಜನರನ್ನು ಆಕರ್ಷಿಸುತ್ತಾ. ಕಾಣಿಕೆ ಸ್ವೀಕರಿಸುತ್ತಾರೆ. ಪಟ್ಟಣ ಸೇರಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ವೇಷಧಾರಿ ಭಕ್ತರು ಎಲ್ಲರ ಮನರಂಜಿಸುತ್ತಿದ್ದಾರೆ.

ಕಳೆದ 10/12 ದಿನಗಳಿಂದ ಬಿಟ್ಟೂಬಿಡದೇ ಸುರಿಯುತ್ತಿರುವ ಸೋನೆ ಮಳೆಯ ನಡುವೆಯೂ ಪಟ್ಟಣ ಸೇರಿ ತಾಲೂಕಿನೆಲ್ಲೆಡೆ ಮೋಹರಂ ಹಬ್ಬವನ್ನು ಸಂಪ್ರದಾಯಬದ್ಧವಾಗಿ ಆಚರಿಸಲು ಜನತೆ ಸನ್ನದ್ಧರಾಗಿದ್ದಾರೆ.

ಹಿಂದೂ-ಮುಸ್ಲಿಂರು ಭಾವೈಕ್ಯತೆಯಿಂದ ಆಚರಿಸುವ ಮೊಹರಂ ಹಬ್ಬದ ಆಚರಣೆ ಮುನ್ನಾ ದಿನ ಎಲ್ಲೆಡೆ ಮೊಹರಂ ಹುಲಿಗಳದ್ದೇ ಅಬ್ಬರ ಕಂಡು ಬರುತ್ತಿದೆ. ಹಿಂದೂ-ಮುಸ್ಲಿಂರು ಭಾವೈಕ್ಯತೆಯಿಂದ ಆಚರಿಸುವ ಮೊಹರಂ ಹಬ್ಬದ ಆಚರಣೆಗೆ ಜನತೆ ಸಜ್ಜಾಗಿದ್ದಾರೆ. ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಈಗ ಎಲ್ಲೆಡೆ ಮೊಹರಂ ಹುಲಿಗಳದ್ದೇ ಅಬ್ಬರ ಕಂಡು ಬರುತ್ತಿದೆ.

ಹುಲಿವೇಷಧಾರಿಗಳಿಗೆ ಬಣ್ಣ ಬಳಿಯುವಲ್ಲಿ ಪ್ರವೀಣ!

ಪಟ್ಟಣದ ಯುವ ಕಲಾವಿದ ಪ್ರವೀಣ ಗಾಯಕರ ಹುಲಿವೇಷ ಬರೆಯುವದರಲ್ಲಿ ಸಿದ್ಧಹಸ್ತರು. ಪ್ರತಿವರ್ಷ ಲಕ್ಷ್ಮೇಶ್ವರ ಮತ್ತು ಸುತ್ತಲಿನ ಹತ್ತಾರು ಗ್ರಾಮಗಳ ಜನರಿಗೆ ಹುಲಿವೇಷದ ಬಣ್ಣ ಬರೆಯುವ ಪ್ರವೀಣ ತಮ್ಮ ಪ್ರಾವಿಣ್ಯತೆ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ.



"ಪಟ್ಟಣ ಸೇರಿ ತಾಲೂಕಿನಾದ್ಯಾಂತ ನಿಗದಿತ ಸ್ಥಳದಲ್ಲಿ ಪಾಂಜಾಗಳ ಪ್ರತಿಷ್ಠಾಪನೆ ಮಾಡಲಾಗಿದ್ದು, ಶುಕ್ರವಾರ ಕತ್ತಲರಾತ್ರಿ, ಶನಿವಾರ ಪಾಂಜಾಗಳ ಮೆರವಣಿಗೆ ನಡೆಯಲಿದೆ."

ಹಬ್ಬದ ಮುನ್ನಾದಿನ ಹುಲಿವೇಷಧಾರಿಗಳಿಗೆ ಬಣ್ಣ ಬಳಿಯುವ ಕಾಯಕದಲ್ಲಿ ಮನೆಮಂದಿಯೆಲ್ಲಾ ನಿರತರಾಗಿರುತ್ತಾ-ರೆ. ಇವರ ಕಲಾ ನೈಪುಣ್ಯತೆಯಿಂದ ನೂರಾರು ಹುಲಿವೇಷಧಾರಿಗಳು ಮೊಹರಂ ಹಬ್ಬಕ್ಕೆ ರಂಗು ನೀಡುತ್ತಿವೆ.

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಹುಲಿವೇಷ ಬರೆಸಿಕೊಳ್ಳುವವರ ಸಂಖ್ಯೆ ತೀರಾ ಕಡಿಮೆಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಇವರ ಸಂಖ್ಯೆ ಕಡಿಮೆಯಾಗಿಲ್ಲ.

ಕುಟುಂಬದ ಮೂಲ ಕಲಾಸೇವೆಯನ್ನು ಇದೀಗ ತನ್ನ ಸಂಗಡಿಗರೊಂದಿಗೆ ಸೇರಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

## ಎಲ್‌ಐಸಿ ಜೀವನ್ ಕಿರಣ್ ಯೋಜನೆ.. ಟರ್ಮ್ ಅವಧಿ ಮುಗಿದ ಬಳಿಕ ಪ್ರೀಮಿಯಂ ಮೊತ್ತ ವಾಪಸ್

■ವಿಜಯಸಾಕ್ಷಿ ಸುದ್ದಿ, ಹೈದರಾಬಾದ್

ಸಾರ್ವಜನಿಕ ವಲಯದ ಜೀವ ವಿಮಾ ಕಂಪನಿ ಐಚಿಅ ಹೊಸ ಟರ್ಮ್ ಪಾಲಿಸಿ ಪ್ರಾರಂಭಿಸಿದೆ. ಜೀವನ್ ಕಿರಣ್ (ಯೋಜನೆ 870) ಹೆಸರಿನಲ್ಲಿ ತರಲಾಗಿದೆ.

ಇದು ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್ ವೈಯಕ್ತಿಕ ಉಳಿತಾಯ ಮತ್ತು ಜೀವ ವಿಮಾ ಯೋಜನೆ (ಐಚಿಅ ಯೋಜನೆ) ಆಗಿದೆ. ಮೆಚ್ಯೂರಿಟಿ ಪೂರ್ಣಗೊಂಡ ನಂತರ, ಪ್ರೀಮಿಯಂ ಮೊತ್ತವನ್ನು ಹಿಂತಿರುಗಿಸಲಾಗುತ್ತದೆ. ಪಾಲಿಸಿ ಅವಧಿಯಲ್ಲಿ ಏನಾದರೂ ಸಂಭವಿಸಿದರೆ, ಕುಟುಂಬ ಸದಸ್ಯರಿಗೆ ಆರ್ಥಿಕವಾಗಿ ಬೆಂಬಲ ನೀಡುತ್ತಾರೆ. ಸಾಮಾನ್ಯವಾಗಿ, ಟರ್ಮ್ ಪಾಲಿಸಿಗಳು ಪ್ರೀಮಿಯಂ ಮೊತ್ತವನ್ನು ಮರುಪಾವತಿಸುವುದಿಲ್ಲ. ಈ ಯೋಜನೆಯಲ್ಲಿ, ಪಾಲಿಸಿಯ ಅವಧಿಯಲ್ಲಿ ವಿಮೆ ಖಾತರಿಪಡಿಸಲಾಗುತ್ತದೆ ಮತ್ತು ಪ್ರೀಮಿಯಂ ಮೊತ್ತವನ್ನು ಮುಕ್ತಾಯದ ಸಮಯದಲ್ಲಿ ಹಿಂತಿರುಗಿಸಲಾಗುತ್ತದೆ.

### ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

## ಕ್ಷಯ ರೋಗ ತಡೆಗೆ ಮುನ್ನೆಚ್ಚರಿಕೆ ಅಗತ್ಯ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಕ್ಷಯ ರೋಗದ ಬಗ್ಗೆ ಭಯಪಡುವ ಅಗತ್ಯವಿಲ್ಲ. ಆದರೆ, ಮುನ್ನೆಚ್ಚರಿಕೆ ವಹಿಸುವ ಅಗತ್ಯವಿದೆ ಎಂದು ತಾಲೂಕಾ ಆರ್‌ಡಿಪಿಆರ್(ಕೆಎಚ್‌ಪಿಟಿ) ಸಂಯೋಜಕಿ ವಿದ್ಯಾ ಕಿತ್ತೂರ ಹೇಳಿದರು.

ಅವರು ಸಮೀಪದ ನಾಗಾವಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಕ್ಷಯರೋಗ ನಿಯಂತ್ರಣ ಕೇಂದ್ರದ ಸಹಯೋಗದ ಆರೋಗ್ಯ ಅಮೃತ ಅಭಿಯಾನದಡಿಯಲ್ಲಿ ಕ್ಷಯ ರೋಗದ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಕ್ಷಯ ರೋಗ ಪ್ರಕರಣಗಳು ಇಲ್ಲದಂತೆ ಮಾಡಬೇಕಾಗಿದೆ. ಕ್ಷಯವು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ರೋಗವಾಗಿದ್ದು, ಎರಡು ವಾರಕ್ಕಿಂತ ಹೆಚ್ಚು ಕೆಮ್ಮು, ಜ್ವರ, ತೂಕ ಕಡಿಮೆಯಾಗುವುದು ಕಂಡುಬಂದಲ್ಲಿ ಸಮೀಪದ ಆಸ್ಪತ್ರೆಗಳಿಗೆ ಭೇಟಿ ನೀಡಬೇಕು. ಕ್ಷಯ ರೋಗವನ್ನು ಸಂಪೂರ್ಣವಾಗಿ ಗುಣ ಮಾಡಲು ಮಾತ್ರೆಗಳು ಲಭ್ಯವಿದ್ದು, ಇದನ್ನು ವೈದ್ಯರ ಸಲಹೆಯಂತೆ ತಪ್ಪದೇ ಕಾಲ ಕಾಲಕ್ಕೆ ತೆಗೆದುಕೊಳ್ಳಬೇಕು ಎಂದರು.

ಧರ್ಮ ಜಾಗೃತಿ ಸಮಾರೋಪ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಮನುಷ್ಯನ ಗುಣಕ್ಕಿರುವ ಬೆಲೆ ಹಣಕ್ಕೆ ಇಲ್ಲ

■ವಿಜಯಸಾಕ್ಷಿ ಸುದ್ದಿ, ಬೀದರ

ಉತ್ಕೃಷ್ಟವಾದ ಮಾನವ ಜೀವನದ ಉನ್ನತಿಗೆ ನೀತಿ ಬೋಧನೆಗಳ ಅವಶ್ಯಕತೆಯಿದೆ. ಮಾನವೀಯತೆ ಮೌಲ್ಯವಿಲ್ಲದ ಜೀವನ ನಿರರ್ಥಕವಾದುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ತಾಲೂಕಿನ ಕೊಳ್ಳಾರ ಕೆ. ವ್ಯಾಪ್ತಿಯಲ್ಲಿ ಬರುವ ಶ್ರೀ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮದಲ್ಲಿ ಜರುಗಿದ ಇಷ್ಟಲಿಂಗ ಮಹಾಪೂಜಾ ಹಾಗೂ ಧರ್ಮ ಜಾಗೃತಿ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಇಡೀ ಬ್ರಹ್ಮಾಂಡ ಬೆಳಗುವ ಸೂರ್ಯನಾಗದಿದ್ದರೂ ಚಿಂತೆಯಿಲ್ಲ. ಮನೆಯಲ್ಲಿ ಬೆಳಗುವ ಪುಟ್ಟ ಹಣತೆಯಾದರೂ ಆಗಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ಬೋಧಿಸಿದ್ದಾರೆ. ಶಿಕ್ಷಣ ಮತ್ತು ಸಂಸ್ಕಾರದ ಮೂಲಕ ಸುಖ, ಶಾಂತಿ, ನೆಮ್ಮದಿ ಪಡೆಯಬೇಕಾದ ಅವಶ್ಯಕತೆಯಿದೆ.



ಪುಣ್ಯಾಶ್ರಮದಲ್ಲಿ ನಡೆದ ಮೂರು ದಿನಗಳ ಕಾರ್ಯಕ್ರಮ ಸಂತೃಪ್ತಿಯನ್ನುಂಟುಮಾಡಿದೆ. ಕಾರ್ಯಕ್ರಮದ ಯಶಸ್ಸಿಗಾಗಿ ಶ್ರಮಿಸಿದ ಸಂಚಾಲಕ ಷಣ್ಮುಖಯ್ಯಸ್ವಾಮಿ ಮೊದಲ್ಗೊಂಡು ಎಲ್ಲ ಭಕ್ತ ಮಂಡಳಿಗೆ ಶುಭ ಹಾರೈಸುತ್ತೇವೆ ಎಂದರು.

ಮೇಹಕರ ಹಿರೇಮಠದ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಜೀವನದ ಮುಂದಿನ ಪುಟ ಏನಿದೆ ಎಂದು ತಿಳಿದು ನೋಡುವ ಶಕ್ತಿ ದೇವರ ಹೊರತು ಬೇರಾರಿಗೂ ಸಾಧ್ಯವಾಗದು. ಸಮಸ್ಯೆಗಳು ಬದುಕಿಗೆ ಅಡ್ಡಿಪಡಿಸುವ ತಡೆಗೋಡೆಗಳಲ್ಲ. ಸಾಗಬೇಕಾದ ಪಥದ ದಿಕ್ಸೂಚಿಗಳಾಗಿವೆ ಎಂದರು. ಏಳು ದಿನಗಳ ಶಿವಪೂಜಾ ತಪೋನುಷ್ಠಾನಗೈದ ತಮಲೂರು ಹಿರೇಮಠದ ಶಿವಾನಂದ ಶಿವಾಚಾರ್ಯ ಸ್ವಾಮಿಗಳಿಗೆ ರೇಶ್ಮೆ ಶಾಲು ಹೊದಿಸಿ ಫಲ ಪುಷ್ಪವಿತ್ತು ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು. ಹಳ್ಳಿಖೇಡ ಚಿಕ್ಕಮಠದ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು ಉದೇಶಾಮೃತವನ್ನಿತ್ತರು.

> ಮನೆ ಕಟ್ಟಲು ಹಣ ಬೇಕು. ಮನಸ್ಸು ಕಟ್ಟಲು ಗುಣ ಬೇಕು. ಹಣದಿಂದ ಕಟ್ಟಿದ ಮನೆಯಲ್ಲಿ ಎಲ್ಲರೂ ಇರಬಹುದು. ಆದರೆ ಗುಣದಿಂದ ಕಟ್ಟಿದ ಮನೆಯಲ್ಲಿ ಯೋಗ್ಯರಷ್ಟೇ ನೆಲೆಸಿರುತ್ತಾರೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆಕಾಶ ಎಷ್ಟೇ ವಿಶಾಲವಾಗಿದ್ದರೂ ನಕ್ಷತ್ರಕ್ಕೆ ಇರುವ ಬೆಲೆ ಆಕಾಶಕ್ಕಿಲ್ಲ. ಹಾಗೇ ಮನುಷ್ಯ ಎಷ್ಟೇ ಶ್ರೀಮಂತನಾಗಿದ್ದರೂ ಗುಣಕ್ಕೆ ಇರುವ ಬೆಲೆ ಹಣಕ್ಕೆ ಇಲ್ಲ. ಸಾಧನೆಯ ಏಣಿಯನ್ನು ಪ್ರತಿಭೆಯಿಂದ ಏರಬೇಕೇ ಹೊರತು ಅಡ್ಡ ಮಾರ್ಗದಿಂದಲ್ಲ.
>
> **– ಡಾ.ವೀರಸೋಮೇಶ್ವರ ಜಗದ್ಗುರುಗಳು.**
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಹುಡುಗಿ ಹಿರೇಮಠದ ವಿರೂಪಾಕ್ಷಲಿಂಗ ಶಿವಾಚಾರ್ಯರು, ಬಿಚಗುಪ್ಪ ಗುರುಲಿಂಗ ಶಿವಾಚಾರ್ಯರು, ಸದಲಾಪುರ ಸಿದ್ಧಲಿಂಗ ಶಿವಾಚಾರ್ಯರು, ಡೊಂಗರಗಿ ಉದಯ ರಾಜೇಂದ್ರ ಶಿವಾಚಾರ್ಯರು, ಹೆಡಗಾಪುರ ಶಿವಲಿಂಗ ಶಿವಾಚಾರ್ಯರು, ನೌಬಾದ ಆಶ್ರಮದ ಡಾ.ರಾಜಶೇಖರ ಗೊರಟಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಡಾ. ಗುರಮ್ಮ ಸಿದ್ಧಾರೆಡ್ಡಿ, ವೈಜನಾಥ ಕಮಠಾಣೆ, ಮಹೇಶ್ವರಸ್ವಾಮಿ, ಡಾ. ಚಂದ್ರಕಾಂತ ಗುದಗೆ, ವೀರಶೆಟ್ಟಿ ಪಾಟೀಲ ನೌಬಾದ್, ಶಿವಶರಣಪ್ಪ ಸೀರಿ, ವೇ.ಷಣ್ಮುಖಸ್ವಾಮಿ, ಶಿವಕುಮಾರಸ್ವಾಮಿ ಆಗಮಿಸಿ ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು. ಇಷ್ಟಲಿಂಗ ಪೂಜಾ ನೆರವೇರಿಸಿ ಧರ್ಮ ಜಾಗೃತಿ ಸಮಾರಂಭ ನಡೆಯಲು ಅವಕಾಶ ಕೊಟ್ಟ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಸೇವಾ ಸಮಿತಿಯವರು ಗೌರವಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಸೊಲ್ಲೂರ್ ಶ್ರೀಕಾಂತಸ್ವಾಮಿ ಇವರಿಂದ ನಿರೂಪಣೆ ನಡೆಯಿತು.

ಜ.ಅನ್ನದಾನೀಶ್ವರ ಮಠದಿಂದ 'ಜಗದ್ಗುರು ಅನ್ನದಾನೀಶ್ವರ ಮಾಧ್ಯಮ ಪ್ರಶಸ್ತಿ'ಗಾಗಿ 1 ಲಕ್ಷ ರೂ ಠೇವಣಿ

# ಶ್ರೀಮಠ-ಪತ್ರಕರ್ತರ ನಡುವೆ ಅವಿನಾಭಾವ ಸಂಬಂಧ



> ಶ್ರೀಮಠಕ್ಕೂ ಪತ್ರಕರ್ತರಿಗೂ ಸದಾ ಅವಿನಾಭಾವ ಸಂಬಂಧವಿದೆ. ಶ್ರೀಮಠದಲ್ಲಿ ಜರುಗುವ ಎಲ್ಲ ಸಭೆ-ಸಮಾರಂಭಗಳ ಸುದ್ದಿಗಳನ್ನು ಎಲ್ಲ ಪತ್ರಕರ್ತರು ಸೊಗಸಾಗಿ ಪ್ರಕಟಿಸುವ ಮೂಲಕ ಶ್ರೀಮಠದ ಕಾರ್ಯಚಟುವಟಿಕೆಗಳನ್ನು ಸಮಾಜಕ್ಕೆ ಪರಿಚಯಿಸುತ್ತಿದ್ದಾರೆ. ಇದನ್ನೆಲ್ಲ ಮನಗಂಡಿರುವ ಪೂಜ್ಯರು ಪತ್ರಕರ್ತರಿಗೆ ಪ್ರಶಸ್ತಿ ನೀಡಲು ಮುಂದಾಗಿರುವುದು ಇತರರಿಗೆ ಮಾದರಿಯಾಗಿದೆ ಎಂದು ತಿಳಿಸಿದರು.
>
> **– ಕಾಶೀನಾಥ ಬಿಳಿಮಗ್ಗದ.**
> ಹಿರಿಯ ಪತ್ರಕರ್ತರು.

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಸ್ವಾಮಿಜಿ ಅವರು ಪತ್ರಕರ್ತರಿಗಾಗಿ ಜಗದ್ಗುರು ಅನ್ನದಾನೀಶ್ವರ ಮಾಧ್ಯಮ ಪ್ರಶಸ್ತಿ ಸ್ಥಾಪಿಸಲು ಶ್ರೀಮಠದಿಂದ ಒಂದು ಲಕ್ಷ ರೂಪಾಯಿ ಠೇವಣಿ ನೀಡಿ, ಅದರಿಂದ ಪ್ರತೀ ವರ್ಷ ತಾಲ್ಲೂಕಿನ ಒಬ್ಬ ಉತ್ತಮ ಪರ್ತಕರ್ತರಿಗೆ ಪ್ರಶಸ್ತಿ ನೀಡಲು ಮುಂದಾಗಿರುವುದು ಶ್ಲಾಘನೀಯ ಎಂದು ಅನ್ನದಾನೀಶ್ವರ ವಿದ್ಯಾ ಸಮಿತಿಯ ಆಡಳಿತಾಧಿಕಾರಿ ಡಾ. ಬಿ ಜಿ ಜವಳಿ ಹೇಳಿದರು.

ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಮಠದಲ್ಲಿ ಗುರುವಾರ ತಾಲ್ಲೂಕು ಪತ್ರಕರ್ತರ ಸಂಘದ ಪದಾಧಿಕಾರಿಗಳಿಗೆ ಶ್ರೀಮಠದಿಂದ ಒಂದು ಲಕ್ಷ ರೂಪಾಯಿ ಹಸ್ತಾಂತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ.ಅನ್ನದಾನೀಶ್ವರ ಸ್ವಾಮೀಜಿಗಳು ಈಗಾಗಲೇ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಶಾಲೆ-ಕಾಲೇಜು ಕಟ್ಟಡ ನಿರ್ಮಾಣಕ್ಕೆ, ಪಟ್ಟಣದಲ್ಲಿ ಬೃಹತ್ ಕ್ರೀಡಾಂಗಣ ನಿರ್ಮಾಣಕ್ಕೆ, ಕನ್ನಡ ಸಾಹಿತ್ಯ ಭವನ ನಿರ್ಮಾಣಕ್ಕೆ, ತಾಲೂಕು ವಿಜ್ಞಾನ ಭವನ ನಿರ್ಮಾಣಕ್ಕೆ, ರುದ್ರಭೂಮಿ ಹೀಗೆ ಹಲವಾರು ಕಾರ್ಯಗಳಿಗೆ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ಉಚಿತವಾಗಿ ನೀಡಿದ್ದಾರೆ ಎಂದರು.

ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಸ್ವಾಮಿಜಿ ಅವರು ತಾಲೂಕು ಪತ್ರಕರ್ತರ ಸಂಘದ ಪದಾಧಿಕಾರಿಗಳಿಗೆ ಒಂದು ಲಕ್ಷ ರೂಪಾಯಿ ಹಣ ಹಸ್ತಾಂತರಿಸಿದರು. ಹಣವನ್ನು ನಿಶ್ಚಿತ ಠೇವಣಿ ಇಟ್ಟು, ಅದರಿಂದ ದೊರೆಯುವ ಹಣದಿಂದ ಪ್ರತೀ ವರ್ಷ ಒಬ್ಬೊಬ್ಬ ಪತ್ರಕರ್ತರಿಗೆ ಪ್ರಶಸ್ತಿ ನೀಡಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತರಾದ ಸಿ ಎಸ್ ಅರಸನಾಳ, ಸಿ ಕೆ ಗಣಪ್ಪನವರ, ಕವಿ ಬಂಕಾಪುರ, ಮಲ್ಲಿಕಾರ್ಜುನಗೌಡ ಪಾಟೀಲ, ಮಂಜುನಾಥ ಜಾಗಟಗೇರಿ, ಕಾಳಿದಾಸ ಬ್ಯಾಂಕ್ ಸಿಬ್ಬಂದಿ ವಿಜಯಲಕ್ಷ್ಮೀ ಹಿರೇಮಠ, ರಾಮು ಡೊಣ್ಣಿ ಇದ್ದರು.

## ಕಲಕೇರಿಯವರಿಗೆ ಗೌರವ ಡಾಕ್ಟರೇಟ್: ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಹಿರಿಯ ಸಂಗೀತ ಕಲಾವಿದ, ಸಾಹಿತಿ ಪಂ.ರಾಜಗುರು ಗುರುಸ್ವಾಮಿ ಕಲಕೇರಿ ಅವರಿಗೆ ಕುವೆಂಪು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಗೌರವಿಸಿದ ಹಿನ್ನೆಲೆಯಲ್ಲಿ ಗಾನಯೋಗಿ ಪಂ.ಡಾ ಪುಟ್ಟರಾಜ ಶಿವಯೋಗಿ ಸೇವಾ ಸಮಿತಿಯಿಂದ ಸನ್ಮಾನಿಸಲಾಯಿತು.



ಸಮಿತಿಯ ಪದಾಧಿಕಾರಿಗಳು ಕಲಕೇರಿ ಅವರ ನಿವಾಸಕ್ಕೆ ತೆರಳಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸಿದ್ಧೇಶ್ವರ ಶಾಸ್ತ್ರಿ ತೆಲ್ಲೂರ ಮಾತನಾಡಿ, ಕಲಾಶ್ರೀ, ರಾಜ್ಯೋತ್ಸವ, ಸಂತಶಿಶುನಾಳ ಶರೀಫ ಪ್ರಶಸ್ತಿ ಪುರಸ್ಕೃತರಾದ ಕಲಕೇರಿ ಅವರು ಸಂಗೀತ ಮತ್ತು ಸಾಹಿತ್ಯದಲ್ಲಿ ಸಾಧನೆ ಮಾಡಿದವರು. ಕುವೆಂಪು ವಿಶ್ವವಿದ್ಯಾಲಯವು ಇವರಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದ್ದು ಯೋಗ್ಯವಾಗಿದೆ ಎಂದರು.

ಸನ್ಮಾನ ಸ್ವೀಕರಿಸಿ ಸಂದರ್ಭೋಚಿತವಾಗಿ ಮಾತನಾಡಿದ ಕಲಕೇರಿಯವರು, ಪಂಚಾಕ್ಷರ ಹಾಗೂ ಪುಟ್ಟರಾಜ ಗವಾಯಿಗಳ ಕೃಪೆಯಿಂದ ಇದೆಲ್ಲ ಸಾಕಾರವಾಗಿದೆ. ಸಮಿತಿಯವರು ಸನ್ಮಾನಿಸಿದ್ದು ಸಂತಸ ತಂದಿದೆ ಎಂದರು.

ವೀರೇಶ ಕಿತ್ತೂರ, ಎಂ ಜಿ ಗುರುಸಿದ್ಧೇಶ್ವರಶಾಸ್ತ್ರಿ ಬೇವೂರ, ಶಿವಲಿಂಗಯ್ಯಶಾಸ್ತ್ರಿ ಸಿದ್ಧಾಪೂರ, ಶಿವಾನಂದೀಶ್ವರಶಾಸ್ತ್ರಿ ಹನಮನಾಳ, ಬಸವರಾಜ ಹೊನ್ನಿಗನೂರ, ಶರಣಯ್ಯಶಾಸ್ತ್ರಿ ಅಗಸಬಾಳ, ರಘುನಂದನಶಾಸ್ತ್ರಿ ಅರಳಗುಂಡಿಗೆ, ಸಂಗಮೇಶ ಕಲಬುರ್ಗಿ, ಕುಮಾರ ಗುತ್ತರಗಿ, ಮಲ್ಲಿಕಾರ್ಜುನ ರೋಣಿಹಾಳ, ಮಾರ್ಕಂಡೇಯ ಹೊಳೆಮಣ್ಣೂರ ಮುಂತಾದವರಿದ್ದರು.

# ರೈತರ ಅನುಕೂಲಕ್ಕೆ ಕೇಂದ್ರದ ಸಬ್ಸಿಡಿ ನೆರವು

▶▶ಮೊದಲನೇ ಪುಟದಿಂದ

> ಗದಗ ಜಿಲ್ಲೆಯಲ್ಲಿ ಒಟ್ಟು 72 ಕಿಸಾನ್ ಸಮೃದ್ಧಿ ಕೇಂದ್ರಗಳು ಕೇಂದ್ರದ ಸಬ್ಸಿಡಿ ದರದಲ್ಲಿ ಗೊಬ್ಬರಗಳನ್ನು ಪೂರೈಸುತ್ತಿವೆ. ಗದಗ ನಗರದಲ್ಲಿ ಎಸ್ ವಿ ಹಲವಾಗಲಿ ಎಂಟರ್‌ಪ್ರೈಸಸ್, ಶ್ರೀ ಎಂಟರ್‌ಪ್ರೈಸಸ್, ಮಲ್ಲಿಕಾರ್ಜುನ ಆಗ್ರೋ ಕೇಂದ್ರ, ಪ್ರಕಾಶ ಆಗ್ರೋ ಕೇಂದ್ರ ಸೇರಿದಂತೆ ಹಲವಾರು ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇದರೊಂದಿಗೆ ಗೊಬ್ಬರ, ಬೀಜ, ಕ್ರಿಮಿನಾಶಕ ಔಷಧಿಗಳಿಗೂ ಕೇಂದ್ರ ಸರ್ಕಾರದ ಸಬ್ಸಿಡಿ ಲಭ್ಯವಿದೆ. ಎಲ್ಲ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು.
>
> **– ಎಂ. ಎಸ್ ಕರಿಗೌಡ್ರ.**

ನಿಂಗಪ್ಪ ಹಂಚಿನಾಳ, ಮಲ್ಲೇಶ ಕರಿಬಿಷ್ಠಿ, ಗೂಳಪ್ಪ ಹಳ್ಳದ, ರಾಚಪ್ಪ ಅಂತರಗೊಂಡ, ಮಲ್ಲಿಕಾರ್ಜುನ ಹೊಳೆಯಣ್ಣವರ, ಬಸವರಾಜ ಹುಬ್ಬಳ್ಳಿ, ಸುಭಾಸ ಕದಡಿ, ಬಸವರಾಜ ಹಡಗಲಿ, ಸೌರವ್ ದೊಬೆ, ಎಮ್‌ಒಪಿಸಿಸಿ ಜೈ ಕಿಸಾನ್ ಕಂಪನಿಯ ಈರಪ್ಪ ಅಣ್ಣಿಗೇರಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಗದಗ ನಗರ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಸವರಾಜ ಪೂಜಾರ ನಿರೂಪಿಸಿದರು. ವಿಜಯ ಕುರ್ತಕೋಟಿ ವಂದಿಸಿದರು.

# ಎಚ್ ಸಿ ಕೊಪ್ಪಳರಿಗೆ ಡಾ.ಬಿ ಆರ್ ಅಂಬೇಡ್ಕರ್ ರಾಜ್ಯ ಪ್ರಶಸ್ತಿ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಪ.ಜಾ/ಪ.ಪಂ ನೌಕರರ ಸಂಘದ ರಾಜ್ಯ ಸಂಘಟನೆಯ ಸಹ ಕಾರ್ಯದರ್ಶಿ, ಗದಗ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಎಚ್ ಸಿ ಕೊಪ್ಪಳ ಅವರ ಸಮಾಜ ಸೇವೆಯನ್ನು ಗೌರವಿಸಿ ಸಂಘವು ಡಾ. ಬಿ ಆರ್ ಅಂಬೇಡ್ಕರ್ ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಬೆಂಗಳೂರಿನ ಸರ್ ಪುಟ್ಟಣ್ಣ ಚೆಟ್ಟಿ ಪುರಭವನ(ಟೌನ್‌ಹಾಲ್)ದ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಮೈಸೂರಿನ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಬಂತೇಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಶಸ್ತಿ ಪ್ರದಾನ ಜರುಗಿತು. ಸಂಘದ ರಾಜ್ಯಾಧ್ಯಕ್ಷ ಎಫ್ ಎಚ್ ಜಕ್ಕಪ್ಪನವರ, ಗೌರವಾಧ್ಯಕ್ಷ ಮಾವಳ್ಳಿ ಶಂಕರ್, ಪ್ರಧಾನ ಕಾರ್ಯದರ್ಶಿ ವೆಂಕಟರಾಮ ಸೇರಿದಂತೆ ಅತಿಥಿಗಳು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ವಿಜೇತರಾದ ಎಚ್ ಸಿ ಕೊಪ್ಪಳ ಅವರಿಗೆ ಸಂಘದ ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳಾದ ಜೆ ಸಿ ಕಮಲದಿನ್ನಿ, ಎಸ್ ಬಿ ಪಡಸಾಲಿ, ಬಿ ನಾಗರಾಜ, ವಿಜಯಕುಮಾರ ಹೊಸಮನಿ, ವೀಣಾ, ಜೆ ಆರ್ ಆದಿ, ಶಾಂತಣ್ಣ ಮುಳವಾಡ, ಸಂಗಣ್ಣನವರ, ನಾಗೇಶ, ಕೆಂಚಪ್ಪ, ಅಮರನಾಥ, ದೊಡ್ಡಮನಿ ಮುಂತಾದವರು ಅಭಿನಂದಿಸಿದ್ದಾರೆ.

## ಯಳವತ್ತಿ ಗ್ರಾ ಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಯಳವತ್ತಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ರೇಷ್ಮಾ ರಸೂಲಸಾಬ ಹಳೆಮನಿ ಮತ್ತು ಉಪಾಧ್ಯಕ್ಷರಾಗಿ ಬಸವಣ್ಣೆಪ್ಪ ಚಿಣಗಿ ಆಯ್ಕೆಯಾಗಿದ್ದಾರೆ.



ಒಟ್ಟು 12 ಸದಸ್ಯ ಸ್ಥಾನಗಳನ್ನು ಹೊಂದಿರುವ ಗ್ರಾ ಪಂಗೆ ಅಧ್ಯಕ್ಷ ಸ್ಥಾನ ಅ ವರ್ಗದ ಮಹಿಳೆ ಮತ್ತು ಉಪಾಧ್ಯಕ್ಷ ಸ್ಥಾನ ಎಸ್‌ಸಿ ವರ್ಗಕ್ಕೆ ಮೀಸಲಾಗಿತ್ತು. ಗುರುವಾರ ನಡೆದ 2ನೇ ಅವಧಿಯ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರೇಣವ್ವ ಲಕ್ಷ್ಮೇಶ್ವರ ಮತ್ತು ರೇಷ್ಮಾ ಹಳೆಮನಿ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಬಸವಣ್ಣೆಪ್ಪ ಚಿಣಗಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಒಂದು ಮತ ಅಸಿಂಧುವಾಗಿದ್ದರಿಂದ ರೇಷ್ಮಾ ಹಳೆಮನಿ ಒಂದು ಮತಗಳ ಅಂತರದಲ್ಲಿ ಆಯ್ಕೆಯಾದರು. ಈ ವೇಳೆ ಸದಸ್ಯರಾದ ಈರನಗೌಡ ಬಾಗೇವಾಡಿ, ಚನ್ನಬಸಗೌಡ ಕಟ್ಟಿ, ಗುಂಡಪ್ಪ ಪೂಜಾರ, ಸೋಮನಗೌಡ ನಿಂಗನಗೌಡರ, ಶಿವಯೋಗಿ ಹೊಸಕೇರಿ, ಗಿರಿಜವ್ವ ಮೆಣಸಿಗಿಮಠ, ದಿಲ್‌ಶಾದಬೇಗಂ ಅಗಸಿಮನಿ, ರೇಣವ್ವ ಲಕ್ಷ್ಮೇಶ್ವರ, ಗಂಗವ್ವ ರಾಮಗೇರಿ, ಹುಲೆಗೆವ್ವ ಭಜಂತ್ರಿ ಇದ್ದರು. ಬಿ ಎನ್ ಗಾಯಕವಾಡ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

## ಮಳೆಯಿಂದ ಕೊಳಗೇರಿ ಜನರ ಬದುಕು ಅತಂತ್ರವಾಗಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಹಲವು ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯಿಂದ ನಗರದ ಬಹುತೇಕ ರಸ್ತೆ, ಗಲ್ಲಿಗಳಲ್ಲಿ ನೀರು ನಿಂತು ಅನಾನುಕೂಲ ಸೃಷ್ಟಿಸುತ್ತಿದೆ. ಇದರಿಂದ ಸಾರ್ವಜನನಿಕರು ಸಂಚರಿಸಲು ಹರಸಾಹಸ ಪಡೆಯುವಂತ ಸ್ಥಿತಿ ನಿರ್ಮಾಣವಾಗಿದ್ದು, ನಗರದ ಕೊಳಗೇರಿ ಜನರ ಬದುಕು ಅತಂತ್ರವಾಗಿದೆ. ಕಂಡೂ ಕಾಣದವರಂತೆ ವರ್ತಿಸುತ್ತಿರುವ ಆಡಳಿತಾಧಿಕಾರಿಗಳ ಕ್ರಮವನ್ನು ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಂಚಾಲಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ ಆರ್ ಮಾನ್ವಿ ಖಂಡಿಸಿದ್ದಾರೆ.

ಗದಗ-ಬೆಟಗೇರಿ ನಗರದ ರಸ್ತೆಗಳ ಅಭಿವೃದ್ಧಿಗಾಗಿ, ಕೊಳಗೇರಿ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರಗಳು ಸಾಕಷ್ಟು ಅನುದಾನ ನೀಡಿದರೂ, ಅವಳಿ ನಗರದ ಜನರಿಗೆ ಸರಿಯಾದ ರಸ್ತೆಗಳ ಭಾಗ್ಯ ಸಿಗುತ್ತಿಲ್ಲ. ನಗರದ ತಗ್ಗು ಪ್ರದೇಶದಲ್ಲಿರುವ ಸ್ಲಂ ಪ್ರದೇಶದ ಮನೆಗಳಲ್ಲಿ ವಾಸವಾಗಿರುವ ಕುಟುಂಬಗಳಿಗೆ ಮಳೆಯಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಕಳೆದ ವರ್ಷವೂ ಇಂಥದೇ ನಿರಂತರ ಮಳೆಯಿಂದ ಸಾಕಷ್ಟು ಮನೆಗಳು ಹಾನಿಗೊಳಗಾದಾಗ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸದರೂ ಕಾಟಾಚಾರದ ಸಮೀಕ್ಷೆ ನಡೆಸಿ ಯಾವುದೇ ಪರಿಹಾರ ನೀಡಿಲ್ಲ. ಜಿಲ್ಲಾಡಳಿತ ಮತ್ತು ನಗರಾಡಳಿತ ಕೂಡಲೇ ಎಚ್ಚೆತ್ತು



ನಗರದ ಕೊಳಗೇರಿ ಮತ್ತು ಬಡವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ಸಮೀಕ್ಷೆ ನಡೆಸಿ, ಸೂಕ್ತ ಪರಿಹಾರ ಘೋಷಣೆ ಮಾಡಬೇಕೆಂದು ಇಮ್ತಿಯಾಜ ಮಾನ್ವಿ ಆಗ್ರಹಿಸಿದ್ದಾರೆ.

ಶ್ರೀ ಗುರುಮೃತ್ಯುಂಜಯ ಮಹಾಸ್ವಾಮಿಗಳ ಸ್ಮರಣಾರ್ಥ ರಾಜ್ಯಮಟ್ಟದ ಪ್ರಶಸ್ತಿ

# 'ಮೃತ್ಯುಂಜಯ ಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ಜು.30ಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಮಣಕವಾಡದ ಮಹಿಮಾಪುರುಷ ಶ್ರೀ ಗುರುಮೃತ್ಯುಂಜಯ ಮಹಾಸ್ವಾಮಿಗಳ ಸ್ಮರಣಾರ್ಥವಾಗಿ ಪ್ರತಿ ವರ್ಷ ಶ್ರೀ ಗುರುಮೃತ್ಯುಂಜಯ ಸೇವಾ ಸಮಿತಿ ಗದಗ, ಸೌಹಾರ್ದಮಹಾಮನೆ ವೇದಿಕೆಯವರು ಕೊಡಮಾಡುವ ರಾಜ್ಯಮಟ್ಟದ 'ಮೃತ್ಯುಂಜಯ ಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ಜುಲೈ 30, ರವಿವಾರ ಮುಂಜಾನೆ 10.27 ಗಂಟೆಗೆ ನಗರದ ಮುಳಗುಂದ ರಸ್ತೆಯಲ್ಲಿರುವ ಕನಕಭವನದಲ್ಲಿ ಜರುಗಲಿದೆ.



ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಸಾನ್ನಿಧ್ಯವನ್ನು ಸುಕ್ಷೇತ್ರ ಮಣಕವಾಡದ ಮ.ನಿ.ಪ್ರ. ಶ್ರೀ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು ವಹಿಸುವರು. ಶ್ರೀ ವಿರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಗಳಾದ ಶ್ರೀ ಕಲ್ಲಯ್ಯಜ್ಜನವರು ಹಾಗೂ ಆಧ್ಯಾತ್ಮ ವಿದ್ಯಾಶ್ರಮದ ಪೂಜ್ಯ ಶ್ರೀ ಡಾ. ಶಿವರಣೆ ನೀಲಮ್ಮ ತಾಯಿ ಸಮ್ಮುಖ ವಹಿಸುವರು. ವೇದಿಕೆಯ ಅಧ್ಯಕ್ಷ, ಹಿರಿಯ ಸಾಹಿತಿ ಐ ಕೆ ಕಮ್ಮಾರ ಅಧ್ಯಕ್ಷತೆ ವಹಿಸುವರು.

ಪ್ರಶಸ್ತಿ ದಾನಿಗಳು, ಮಾಜಿ ಮಂತ್ರಿಗಳಾದ ಎಸ್ ಎಸ್ ಪಾಟೀಲ ಹಾಗೂ ಗದಗ ತಾಲೂಕಾ ಕುರುಬರ ಸಂಘದ ಅಧ್ಯಕ್ಷ ಫಕೀರಪ್ಪ ಹೆಬಸೂರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

> 'ಮೃತ್ಯುಂಜಯಶ್ರೀ 2023'ರ ರಾಜ್ಯಮಟ್ಟದ ಪ್ರಶಸ್ತಿ ಈ ಬಾರಿ ವೃತ್ತಿರಂಗಕಲೆಯ ಸ್ತ್ರೀ ಪಾತ್ರದಾರಿಯಾದ ಮಹದೇವ ಎಂ ಜಿ ಹೊಸೂರು ಅವರಿಗೆ ಲಭಿಸಿದೆ. ಪ್ರಶಸ್ತಿಯು 10 ಸಾವಿರ ರೂ. ನಗದು ಹಾಗೂ ಸ್ಮರಣಿಕೆಯನ್ನೊಳಗೊಂಡಿದೆ. ಮಹದೇವ ಹೊಸೂರು ಅವರು ಸದ್ಯ ಹಾನಗಲ್ಲ ಕುಮಾರಸ್ವಾಮಿ ಕೃಪಾಪೋಷಿತ ಪುಟ್ಟರಾಜ ಪಂಚಾಕ್ಷರಿ ನಾಟ್ಯ ಸಂಘದ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅದೇ ದಿನ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, ಬೆಂಗಳೂರಿನ ಖ್ಯಾತ ಜಾದುಗಾರ, ಜಾನಪದ ಗಾರುಡಿಗ, ಕಡಬ ಶ್ರೀನಿವಾಸ ಇವರಿಂದ ವಿಶೇಷ ಜಾದೂ ಕಾರ್ಯಕ್ರಮ ಜರುಗುವವು ಹಾಗೂ ಕೊಣ್ಣೂರಿನ ಜಾನಪದ ಹಾಡುಗಾರ ಬಾಳು ಬಾಲಪ್ಪನವರು ಹಾಗೂ ಅನರ್ಘ್ಯ ಸಂಗೀತ ಪಾಠಶಾಲೆಯ ಮಕ್ಕಳಿಂದ ಸಂಗೀತ ಜರುಗಲಿದೆ. ಈ ಪುಣ್ಯ ಕಾರ್ಯದಲ್ಲಿ ಪಾಲ್ಗೊಂಡು ಶ್ರೀ ಗುರುಮೃತ್ಯುಂಜಯ ಅಪ್ಪನ ಕೃಪೆಗೆ ಪಾತ್ರರಾಗಲು ಸಮಿತಿ ಅಧ್ಯಕ್ಷ ಐ ಕೆ ಕಮ್ಮಾರ ಹಾಗೂ ಪದಾಧಿಕಾರಿಗಳಾದ ಎಚ್ ಎನ್ ಕುರಿ, ರಾಯಪ್ಪ ನಾಗನೂರ, ಒಡೆಯರ ಶಿವಣ್ಣ, ಮೃತ್ಯುಂಜಯ ಹಟ್ಟಿ, ಶಿವಶಂಕರಪ್ಪ ಆರಟ್ಟಿ, ಶರಣಪ್ಪಗೌಡ್ರ ಬಳ್ಳೊಳ್ಳಿಯವರು ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.


ಕರ್ನಾಟಕ ಸರಕಾರ (ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ)

**ಜಿಲ್ಲಾ ತರಬೇತಿ ಸಂಸ್ಥೆ, ಗದಗ-582103**

**ಕೊಠಡಿ ಸಂಖ್ಯೆ : 106, 1ನೇ ಮಹಡಿ, ಜಿಲ್ಲಾ ಆಡಳಿತ ಭವನ, ಹುಬ್ಬಳ್ಳಿ ರಸ್ತೆ, ಗದಗ ದೂರವಾಣಿ ಫ್ಯಾಕ್ಸ್ : 08372-220721**

**E-Mail ID : dti.gadag@gmail.com**

ಸಂಖ್ಯೆ : DT1/167/ADMN/EST/2023-GADAG-DTI ದಿನಾಂಕ: 27/07/2023

**ಟೆಂಡರ್ ಪ್ರಕಟಣೆ**

ಟೆಂಡರ್ ಕ್ರ: DTI/167/ADMIN/EST/2023-GADAG-DTI ದಿನಾಂಕ : 27-07-2023 ರಲ್ಲಿ ಗದಗ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 2023-24 ನೇ ಸಾಲಿನಲ್ಲಿ ಆಯೋಜಿಸಲಾಗುವ ತರಬೇತಿ ಕಾರ್ಯಕ್ರಮಗಳಲ್ಲಿ ಹಾಜರಾಗುವ ಪ್ರಶಿಕ್ಷಣಾರ್ಥಿಗಳಿಗೆ ಊಟೋಪಚಾರ/ಚಹಾ ಮತ್ತು ಬಿಸ್ಕಿಟ್ ಪೂರೈಸಲು e-Procurement portal ನಲ್ಲಿ (ಕ್ರಮಾಂಕ : ATI/2023-24/SE0030) ದಿನಾಂಕ : 27-07-2023 ರಂದು, ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಪೂರೈಕೆದಾರರು ದಿನಾಂಕ : **10-08-2023** ರಂದು ಸಂಜೆ 05.30 ಗಂಟೆಯ ಒಳಗಾಗಿ **https://kppp.karnataka.gov.in** ಪೋರ್ಟಲ್ ನಲ್ಲಿ ತಮ್ಮ ಅಗತ್ಯ ದಾಖಲೆಗಳೊಂದಿಗೆ ದರಪಟ್ಟಿಯನ್ನು ಸಲ್ಲಿಸುವುದು, ತಾಂತ್ರಿಕ ಬಿಡ್‌ನ್ನು ದಿನಾಂಕ : **14-08-2023** ರಂದು ಬೆಳಿಗ್ಗೆ 11.30 ಕ್ಕೆ ತೆರೆಯಲಾಗುವುದು.

**ಸಹಿ/- ಪ್ರಾಚಾರ್ಯರು,**
**ಜಿಲ್ಲಾ ತರಬೇತಿ ಸಂಸ್ಥೆ, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/86/2023-24

## ರೈತ ಬಾಂಧವರು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಲ್ಲಿ 2023ರ ಮುಂಗಾರು ಹಂಗಾಮಿನಲ್ಲಿ ಒಟ್ಟು 309810 ಹೆ. ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆಗುರಿ ಹೊಂದಲಾಗಿತ್ತು. ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಹೆಸರು ಪ್ರಮುಖ ಬೆಳೆಯಾಗಿರುವುದರಿಂದ 125000 ಹೆ.ಪ್ರದೇಶದಲ್ಲಿ ಬಿತ್ತುವ ಗುರಿ ಹೊಂದಲಾಗಿತ್ತು. ಮುಂಗಾರು ಮಳೆ ಸಕಾಲದಲ್ಲಿ ಬಾರದ ಕಾರಣ ಹೆಸರು ಅಂದಾಜು 22000 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಇಲ್ಲಿಯವರೆಗೆ ಶೇ. 33 ರಷ್ಟು ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆಯಾಗಿದ್ದು, ಮೆಕ್ಕೆಜೋಳ 55000 ಹೆ., ಹತ್ತಿ 3000 ಹೆ., ಸೂರ್ಯಕಾಂತಿ 6500 ಹೆ., ಶೇಂಗಾ 11500 ಹೆ., ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಪ್ರಸ್ತುತ ಎಲ್ಲಾ ಬೆಳೆಗಳು 30 ರಿಂದ 45 ದಿನಗಳ ಬೆಳೆಯಾಗಿದ್ದು, ಜಿಲ್ಲೆಯಲ್ಲಿ ಇತ್ತೀಚೆಗೆ ನಿರಂತರವಾಗಿ ಬೀಳುತ್ತಿರುವ ಮಳೆಯಿಂದ ಬಿಸಿಲು ಇರದ ಕಾರಣ ಬೆಳೆಗಳಿಗೆ ಕೀಟ ಹಾಗೂ ರೋಗದ ಬಾಧೆ ಕಾಡುವ ಸಂಭವವಿರುತ್ತದೆ.

**ರೈತರು ಕೈಗೊಳ್ಳಬೇಕಾಗಿರುವ ಮುಂಜಾಗ್ರತಾ ಕ್ರಮಗಳು ಕೆಳಗಿನಂತಿವೆ :**

ಹೊಲದಲ್ಲಿ ನಿಂತಿರುವ ನೀರನ್ನು ಹೊರಹಾಕಲು ವಿರ್ವಾಡು ಮಾಡುವುದು. ಹೊಲದಲ್ಲಿ ಅಲ್ಲಲ್ಲಿ ಬಸಿಗಾಲುವೆಗಳನ್ನು ಮಾಡಿ ಮಣ್ಣಿನಲ್ಲಿ ಇರುವ ಹೆಚ್ಚಾದ ನೀರನ್ನು ಬಸಿದು ಹೋಗುವಂತೆ ನೋಡಿಕೊಳ್ಳುವುದು. ಬೆಳೆಗಳ ಬೆಳೆ ಚೈತನ್ಯಕ್ಕೆ ಆಯಾ ಬೆಳೆಗಳಿಗೆ ಶಿಫಾರಸ್ಸಿನಂತೆ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡುವುದು. ಸತತ ಮಳೆಯಿಂದ ಹೆಸರು ಬೆಳೆಯ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿರುವುದರಿಂದ ಅಂತರ್ವ್ಯಾಪಿ ಕೀಟನಾಶಕ ಥೈಯೋಮೆಥೋಕ್ಸಾಮ್0.2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಹಾಗೂ ನೀರಿನಲ್ಲಿ ಕರಗುವ ರಸಗೊಬ್ಬರ 19:19:19 ನ್ನು 5ಗ್ರಾಂ/ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. ಗೋವಿನ ಜೋಳದಲ್ಲಿ ಫಾಲ್ ಸೈನಿಕ ಹುಳುವಿನ ಬಾಧೆ ಕಂಡು ಬಂದಲ್ಲಿ ಕೂಡಲೇ ನಿರ್ವಹಣೆಗೆ ಇಮಾಮೆಕ್ಟಿನ್ ಬೆಂಝೋಯೇಟ್ 1.9 ಇ.ಸಿ. ಯನ್ನು 25 ಮಿ.ಲೀ. ಪ್ರತಿ ಟ್ಯಾಂಕ ನೀರಿಗೆ ಬೆರೆಸಿ ಸಿಂಪಡಿಸುವುದು. ಮುಂಚಿತವಾಗಿ ಬಿಟಿ ಹತ್ತಿ ಬೆಳೆದ ರೈತರ ಹೊಲಗಳಲ್ಲಿ ಚುಕ್ಕೆ ಮೂತಿ ಹುಳುವಿನ ಬಾಧೆ ಕಂಡು ಬಂದಲ್ಲಿ ಇದರ ನಿರ್ವಹಣೆಗಾಗಿ ಪ್ರತಿ ಲೀಟರ್ ನೀರಿಗೆ 2 ಮಿ.ಲೀ ಪ್ರೊಫೆನೊಫಾಸ್ ಅಥವಾ ಕಾರ್ಬೋಸಲ್ಫಾನ್ 2ಗ್ರಾಂ/ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. ಸೂರ್ಯಕಾಂತಿ ಬೆಳೆಯುವ ರೈತರು ಆಗಸ್ಟ್ 15ನೇ ತಾರೀಖಿನ ನಂತರ ಬಿತ್ತನೆ ಕೈಗೊಳ್ಳಬಹುದು. ಹೊಲದ ಸುತ್ತಲು ಕನಿಷ್ಠ 4 ರಿಂದ 5 ಸಾಲು ಎತ್ತರವಾಗಿ ಬೆಳೆಯುವ ಜೋಳ, ಸಜ್ಜೆ, ಗೋವಿನ ಜೋಳವನ್ನು ದಟ್ಟವಾಗಿ ಬಿತ್ತಬೇಕು. ಹೊಲದ ಸುತ್ತಲೂ ಇರುವ ಪಾರ್ಥೇನಿಯಂ ಮತ್ತು ಇತರೆ ಕಳೆಗಳನ್ನು ತೆಗೆಯುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಕೃಷಿ ವಿಜ್ಞಾನ ಕೇಂದ್ರ, ರೈತ ಸಂಪರ್ಕ ಕೇಂದ್ರ ಹಾಗೂ ಕೃಷಿ ಸಂಶೋಧನಾ ಕೇಂದ್ರ, ಗದಗ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ರಂಭಾಪುರಿ ನಗರದ ಸರ್ಕಾರಿ ಶಾಲೆಗೆ ತಲುಪಲು ಕೆಸರು ರಸ್ತೆಯಲ್ಲಿ ಜಾರುಬಂಡಿಯಾಟದ ಹಿಂಸೆ**

# ಮಕ್ಕಳು, ಶಿಕ್ಷಕರಿಗೆ ತಪ್ಪದ ನರಕಯಾತನೆ





■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಮುಕ್ತಿಮಂದಿರ ರಸ್ತೆಯಲ್ಲಿರುವ ರಂಭಾಪುರಿ ನಗರದಲ್ಲಿನ ಸರ್ಕಾರಿ ಶಾಲೆಗೆ ಹೋಗುವ ರಸ್ತೆ ಸಂಪೂರ್ಣ ಕೆಸರುಮಯವಾಗಿದ್ದು, ಮಕ್ಕಳು ಹಾಗೂ ಶಿಕ್ಷಕರು ಶಾಲೆಗೆ ತಲುಪಲು ಇನ್ನಿಲ್ಲದಂತೆ ಸರ್ಕಸ್ ಮಾಡುವ ಪರಿಸ್ಥಿತಿ ಎದುರಾಗಿದೆ.

ಪಟ್ಟಣದ ಹೊರವಲಯದ ರಂಭಾಪುರಿ ನಗರದ ಆಶ್ರಯ ಕಾಲೋನಿಯ ಹತ್ತಿರ ಇರುವ ಈ ಶಾಲೆಗೆ ಹೋಗುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಸತತವಾಗಿ ಸುರಿಯುತ್ತಿರುವ ಮಳೆಗೆ, ರಸ್ತೆ ಸದ್ಯ ಕೆಸರು ಗದ್ದೆಯ ಸ್ವರೂಪ ತಾಳಿದ್ದು, ನರಕ ದರ್ಶನ ಮಾಡಿಸುವಂತಿದೆ. ಶಾಲೆ ತಲುಪಲು ಮಕ್ಕಳು ಮತ್ತು ಶಿಕ್ಷಕರು ಜಾರುತ್ತ, ಹೂತು ಬೀಳುವ ಕಾಲುಗಳನ್ನು ಕೀಳುತ್ತ, ಒಬ್ಬರ ಕೈ ಒಬ್ಬರು ಆಧಾರವಾಗಿ ಹಿಡಿದು, ಕೆಸರಲ್ಲಿಯೇ ಸಾಗಿ ಹೋಗುವುದು ನಿತ್ಯದ ಕಾಯಕವಾಗಿದೆ. ಇದೇ ಮಾರ್ಗವಾಗಿ ರೈತರು ತಮ್ಮ ಜಮೀನುಗಳಿಗೂ ಹೋಗುತ್ತಿದ್ದು, ರೈತರೂ ಪರದಾಡುವಂತಾಗಿದೆ.

1ರಿಂದ 5ನೇ ತರಗತಿವರೆಗಿನ ಈ ಶಾಲೆಯಲ್ಲಿ ಓರ್ವ ಅಂಗವಿಕಲ ವಿದ್ಯಾರ್ಥಿಯೂ ಸೇರಿ ಒಟ್ಟು 23 ಮಕ್ಕಳು ಓದುತ್ತಿದ್ದಾರೆ. ಪಟ್ಟಣದ ಹೊರವಲಯದ ಈ ಶಾಲೆಯಲ್ಲಿ ಮೊದಲಿನಿಂದಲೂ ಮಕ್ಕಳ ಸಂಖ್ಯೆ ಕಡಿಮೆ ಇದೆ. ವಿವಿಧ ಕಾರಣಗಳಿಂದ ಈ ಪ್ರದೇಶದ ಪಾಲಕರು ಮಕ್ಕಳನ್ನು ಬೇರೆ ಶಾಲೆಗಳಿಗೆ ಕಳಿಸುತ್ತಾರೆ. ಹೀಗಿರುವಾಗ, ಈ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸಲು ಶಿಕ್ಷಕರು ಪಾಲಕರಲ್ಲಿ ಪರಿಪರಿಯಾಗಿ ವಿನಂತಿಸಿ, ಮನವೊಲಿಸಿ, ಮಕ್ಕಳ ಸಂಖ್ಯೆ ಹಿಡಿದಿಟ್ಟುಕೊಳ್ಳುತ್ತಾ ಶಾಲೆಗೆ ಬೀಗ ಹಾಕದಂತೆ ನೋಡಿಕೊಳ್ಳುತ್ತಿದ್ದಾರೆ. ಈ ಕ್ಷೇತ್ರದ ಶಾಸಕರು, ಜನಪ್ರತಿನಿಧಿಗಳು, ಸ್ಥಳೀಯ ಪುರಸಭೆ ಇತ್ತ ಗಮನ ನೀಡಿ, ಸದರಿ ರಸ್ತೆಯನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ನುಕೂಲ ಕಲ್ಪಿಸಬೇಕೆಂದು ನಿವಾಸಿಗಳಾದ ನಾಗಪ್ಪ ಹುಳಕೆಳ್ಳಪ್ಪನವರ, ಯಲ್ಲಪ್ಪ ಕೊರದಾಳ, ಚನ್ನಪ್ಪ ಧರ್ಮಂತರ ಆಗ್ರಹಿಸಿದ್ದಾರೆ.

ಆದರೆ ಈ ಶಾಲೆಯ ಅಭಿವೃದ್ಧಿ, ಮೂಲಭೂತ ಸೌಲಭ್ಯ ಕಲ್ಪಿಸುವಲ್ಲಿ ಯಾರ ಸಹಾಯ-ಸಹಕಾರವೂ ಇಲ್ಲದಾಗಿದೆ. ಅಗತ್ಯ ಸೌಲಭ್ಯ, ಸ್ವಚ್ಛತೆ ಮತ್ತು ಸಮರ್ಪಕ ನಿರ್ವಹಣೆ ಕೊರತೆಯಿಂದ ಮಕ್ಕಳು ಸಮಸ್ಯೆ ಅನುಭವಿಸುತ್ತಿದ್ದಾರೆ. ಮಳೆ ಬಂದರೆ ಶಾಲೆಯ ಒಳಾವರಣದಲ್ಲಿ ಆಳೆತ್ತರ ಕಸ ಬೆಳೆದು ಶಾಲೆಗೆ ಬರುವ ಮಕ್ಕಳು, ಶಿಕ್ಷಕರು ಮತ್ತು ಪಾಲಕರಲ್ಲಿ ಭಯ ಆವರಿಸುತ್ತದೆ. ಈ ಶಾಲೆಯ ರಸ್ತೆ ಅಭಿವೃದ್ಧಿಗಾಗಿ ಸ್ಥಳೀಯ ಪುರಸಭೆ ಸದಸ್ಯರು ಹಾಗೂ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಲಾಗಿದ್ದರೂ, ಅನುದಾನದ ಕೊರತೆಯ ಕಾರಣದಿಂದ ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

> 1-5ನೇ ತರಗತಿಯವರೆಗಿನ ಚಿಕ್ಕ ಮಕ್ಕಳು ಶಾಲೆಗೆ ಮೊಣಕಾಲವರೆಗೆ ಸಿಕ್ಕುಬೀಳುವ ಕೆಸರಿನಲ್ಲಿಯೇ ಎದ್ದು-ಬಿದ್ದು ಸಾಗಬೇಕು. ನಮ್ಮ ಮಗ ಮಹಮ್ಮದಬಾಲೀದ ಅಂಗವಿಕಲನಾಗಿದ್ದು, ಬೇರೆಡೆ ಹೋಗುತ್ತಿದ್ದ ಮಗನನ್ನು ಶಿಕ್ಷಕರ ಮನವಿ ಮಾಡಿಕೊಂಡಿದ್ದರಿಂದ ಈ ಶಾಲೆಗೆ ಸೇರಿಸಿದ್ದೇವೆ. ದಯವಿಟ್ಟು ಈ ಶಾಲೆಗೆ ಹೋಗುವ ರಸ್ತೆಯನ್ನು ಸರಿಪಡಿಸಿ, ಶಾಲೆಯ ಅಭಿವೃದ್ಧಿಗೆ ಮುಂದಾಗಬೇಕು.
>
> – ಬಾಬುಲಾಲ್ ಆಲೂರ.
> ಪಾಲಕರು.

# ರೈತರಿಗೆ ಸಲಹೆ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ 2023ರ ಮುಂಗಾರು ಹಂಗಾಮಿನಲ್ಲಿ ಅಂದಾಜು 6500 ಹೆ. ಪ್ರದೇಶದಷ್ಟು ವಿವಿಧ ಸಂಸ್ಥೆಗಳ ಸೂರ್ಯಕಾಂತಿ ಹೈಬ್ರಿಡ್‌ಗಳ ಬಿತ್ತನೆಯಾಗಿರುತ್ತದೆ. ಕಳೆದ 2022ಸಾಲಿನಲ್ಲಿ ಬಿತ್ತನೆ ಮಾಡಿದ್ದು ಸಿಂಜೆಂಟಾ ಕಂಪನಿಯ ಸೂರ್ಯಕಾಂತಿ ಎಸ್.ಬಿ.293 ಹೈಬ್ರಿಡ್‌ನ ಒಂದೇ ಗಿಡದಲ್ಲಿ ಒಂದಕ್ಕಿಂತ ಹೆಚ್ಚಿಗೆ ಸೂರ್ಯಕಾಂತಿ ತೆನೆಬಿಟ್ಟಿದ್ದು, ಇಳುವರಿಯು ಗಣನೀಯವಾಗಿ ಕಡಿಮೆಯಾಗಿರುತ್ತದೆಯೆಂದು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ವರದಿ ಮಾಡಿರುತ್ತಾರೆ. ಪ್ರಸ್ತುತ ವರ್ಷದಲ್ಲಿಯೂ ಮುಂಡರಗಿ ಹಾಗೂ ಗದಗ ತಾಲೂಕಿನಲ್ಲಿ ಬೆಳೆದ ಸಿಂಜೆಂಟಾ ಕಂಪನಿಯ ಸೂರ್ಯಕಾಂತಿ ಎಸ್.ಬಿ.293 ಹೈಬ್ರಿಡ್‌ನ ತೆನೆಯಲ್ಲಿ ಕಾಳು ಕಟ್ಟದೇ ಹಸಿರಾಗಿ (ಗೊಡ್ಡುರೋಗ) ಬೆಳೆದು ಇಳುವರಿ ಕಡಿಮೆ ಬಂದಿರುತ್ತದೆ ಎಂದು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ವರದಿ ನೀಡಿರುತ್ತಾರೆ. ಈಗಾಗಲೇ ಇಲಾಖೆಯಿಂದ ಎಸ್.ಬಿ. 293 ಮಾರಾಟ ಮಾಡದಂತೆ ತಡೆ-ಯಾಜ್ಞೆ ಹೊರಡಿಸಲಾಗಿದೆ.

ಜಿಲ್ಲೆಯಲ್ಲಿ ಸೂರ್ಯಕಾಂತಿ ಬೆಳೆಯುವ ರೈತರು ಇನ್ನು ಮುಂದೆ ಸೂರ್ಯಕಾಂತಿ ಹೈಬ್ರಿಡ್‌ನ್ನು ಬಿತ್ತನೆ ಮಾಡುವ ಮೊದಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದೆ. ಅದೇ ಜಮೀನುಗಳಲ್ಲಿ ಪದೇ ಪದೇ ಸೂರ್ಯಕಾಂತಿ ಬೆಳೆಯನ್ನು ಬೆಳೆಯದೇ ಬೆಳೆ ಪರಿವರ್ತನೆ ( ಕ್ರಾಪ್ ರೊಟೇಷನ್) ಮಾಡುವುದು ಕಡ್ಡಾಯ ಹಾಗೂ ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳಲು ತಿಳಿಸಲಾಗಿದೆ. ಮಾಗಿ ಉಳುಮೆ ಕಡ್ಡಾಯವಾಗಿ ಅನುಸರಿಸಲು ತಿಳಿಸಲಾಗಿದೆ. ಜೈವಿಕ ಗೊಬ್ಬರವಾದ ಅಜೋಸ್ಪಿರಿಲಮ್ (200 ಗ್ರಾಮ್ ಪ್ರತಿ ಎಕರೆಗೆ) ಹಾಗೂ ಸಾವಯವ ಗೊಬ್ಬರಗಳಾದ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ (3.2 ಟನ್ ಪ್ರತಿ ಎಕರೆಗೆ) ಬಳಸಲು ತಿಳಿಸಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈತರಿಗೆ ವೈಜ್ಞಾನಿಕ ಸಲಹೆಗಳನ್ನು ನೀಡಲು ವಿಜ್ಞಾನಿಗಳ ನಿಯೋಜನೆ

■ವಿಜಯಸಾಕ್ಷಿ ಸುದ್ದಿ, ಗದಗ

ಕೃಷಿ ವಿಶ್ವವಿದ್ಯಾಲಯ, ಧಾರವಾಡದಿಂದ ಬಿಡುಗಡೆಯಾದ ಹೊಸತಳಿಗಳು/ತಾಂತ್ರಿಕತೆಗಳನ್ನು ಜನಪ್ರಿಯಗೊಳಿಸಲು ಪಾಕ್ಷಿಕದಲ್ಲಿ ಕನಿಷ್ಠ ಒಂದು ಸಾರಿ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡುವುದು, ಕೃಷಿ ತಾಂತ್ರಿಕ ಸಮಸ್ಯೆಗಳ ಬಗ್ಗೆ ಹೋಬಳಿ ಮಟ್ಟದ ಕೃಷಿ, ಕಂದಾಯ, ತೋಟಗಾರಿಕೆ, ರೇಷ್ಮೆ ಹಾಗೂ ಇತರೆ ಇಲಾಖೆಗಳು ಮತ್ತು ರೈತರೊಂದಿಗೆ ಚರ್ಚಿಸುವುದು ಹಾಗೂ ಕ್ಷೇತ್ರ ಭೇಟಿ ನೀಡುವುದು ಹಾಗೂ ರೈತರಿಗೆ ವೈಜ್ಞಾನಿಕ ಸಲಹೆಗಳನ್ನು ನೀಡಲು ಹೋಬಳಿವಾರು ರೈತ ಸಂಪರ್ಕ ಕೇಂದ್ರಗಳಿಗೆ ಸಂಪರ್ಕ ವಿಜ್ಞಾನಿಗಳನ್ನು ನಿಯೋಜಿಸಲಾಗಿದೆ, ರೈತರು ತಮ್ಮ ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳಿಗೆ ಕೀಟ / ರೋಗ ಭಾದೆ ಮತ್ತು ತಾಂತ್ರಿಕ ಮಾಹಿತಿಗಾಗಿ ಕೆಳಕಂಡ ವಿಜ್ಞಾನಿಗಳನ್ನು ಸಂಪರ್ಕಿಸಬಹುದಾಗಿದೆ.

ಬೆಟಗೇರಿ ಹೋಬಳಿ ಡಾ.ಎಮ್.ಎಸ್. ಬಂಡಿ, ಕೃಷಿ ವಿಜ್ಞಾನಕೇಂದ್ರ, ಹುಲಕೋಟಿ (08372-289325); ಹುಲಕೋಟಿ ಹೋಬಳಿ ಡಾ.ಹೇಮಾವತಿ ಆರ್. ಹಿರೇಗೌಡರ, ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ (08372 289325;ಕೊಣ್ಣೂರು ಹೋಬಳಿ ಡಾ.ಸಿ.ವಿಜಯಕುಮಾರ ಕೃಷಿ ಸಂಶೋಧನಾ ಕೇಂದ್ರ, ಬೆಳವಟಗಿ(8123153773); ನರಗುಂದ ಹೋಬಳಿ ಡಾ.ಎಸ್.ಎ. ಗದ್ದನಕೇರಿ, ಕೃಷಿ ಸಂಶೋಧನಾ ಕೇಂದ್ರ, ಬೆಳವಟಗಿ (9448232246); ಹೊಳೆಆಲೂರು ಹೋಬಳಿ ಡಾ.ಎಸ್.ಬಿ.ಪಾಟೀಲ, ಕೃಷಿ ಸಂಶೋಧನಾ ಕೇಂದ್ರ, ಬಾಗಲಕೋಟ (9886410908) ನರೇಗಲ್ ಹೋಬಳಿ ಡಾ.ಸಿ.ಎಮ್. ರಫಿ, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಬೆಳವಟಗಿ (9060919915); ರೋಣ ಹೋಬಳಿ ಡಾ. ಸಂಗಶೆಟ್ಟಿ ಬಾಲಕುಂದೆ, ಕೃಷಿ ಸಂಶೋಧನಾ ಕೇಂದ್ರ, ಅಣ್ಣಿಗೇರಿ (9741058053); ಡಂಬಳ ಹೋಬಳಿ ಡಾ. ಪ್ರಭಾವತಿರಾವ್, ಕೃಷಿ ಸಂಶೋಧನಾ ಕೇಂದ್ರ, ಅಣ್ಣಿಗೇರಿ (9741855081); ಮುಂಡರಗಿ ಹೋಬಳಿ ಡಾ.ನಾಗಭೂಷಣಕೆ. ನಾಯ್ಡು, ಕೃಷಿ ಸಂಶೋಧನಾ ಕೇಂದ್ರ, ಅಣ್ಣಿಗೇರಿ (8884023179) ;ಲಕ್ಷ್ಮೇಶ್ವರ ಹೋಬಳಿ ಡಾ. ರಾಜು ಎಲ್. ಚವ್ಹಾಣ, ಕೃಷಿ ಸಂಶೋಧನಾ ಕೇಂದ್ರ, ಪ್ರಭುನಗರ (8951831964); ಶಿರಹಟ್ಟಿ ಹೋಬಳಿ ಡಾ. ಪ್ರವೀಣ ಗೋರೋಜಿ, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ (9480123820).



ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ 82ನೇ ವರ್ಷದ ಹುಟ್ಟು ಹಬ್ಬವನ್ನು ಅಭಿಮಾನಿಗಳು ಗದಗನ ಹೂಗಾರ ಪ್ಲಾಟ್ ನಲ್ಲಿ ಕೇಕ್ ಕತ್ತರಿಸುವ ಮೂಲಕ ಆಚರಿಸಿದರು.

**ಪ್ರವಾಸಿಗರಿಂದ ಕಪ್ಪತಗುಡ್ಡದ ಪರಿಸರಕ್ಕೆ ಹಾನಿ: ಗುಡ್ಡದ ತುಂಬ ಪ್ಲಾಸ್ಟಿಕ್ ತ್ಯಾಜ್ಯ**

# ಕಪ್ಪತಗುಡ್ಡ ಪ್ರವೇಶಕ್ಕೆ ನಿರ್ಬಂಧ

■ವಿಜಯಸಾಕ್ಷಿ ಸುದ್ದಿ, ಗದಗ

ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಪ್ರಸಿದ್ಧವಾಗಿರುವ ಕಪ್ಪತಗುಡ್ಡದ ಪರಿಸರಕ್ಕೆ ಇತ್ತೀಚಿನ ದಿನಗಳಲ್ಲಿ ಪ್ರವಾಸಿಗರಿಂದ ಸಾಕಷ್ಟು ಹಾನಿಯಾಗುತ್ತಿದ್ದು, ಕಪ್ಪತಗುಡ್ಡಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಕಪ್ಪತಗುಡ್ಡ ಪರಿಸರದಲ್ಲಿ ನಿರಂತರವಾಗಿ ಮಳೆ ಯಾಗುತ್ತಿರುವುದರಿಂದ ಈ ತಾಣ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಗುಡ್ಡದ ಸೌಂದರ್ಯ ವನ್ನು ಕಣ್ತುಂಬಿಕೊಳ್ಳಲು ರಾಜ್ಯದ ನಾನಾ ಭಾಗದಿಂದ ನಿಸರ್ಗ ಪ್ರಿಯರು ಭೇಟಿ ನೀಡುತ್ತಿದ್ದಾರೆ.

ಹೀಗೆ ಭೇಟಿ ನೀಡುವ ಪ್ರವಾಸಿಗರು ಹದ್ದು ಮೀರಿ ವರ್ತಿಸುತ್ತಿದ್ದಾರೆ. ಮದ್ಯಪಾನ ಮಾಡಿ ಅರಣ್ಯ ಪ್ರದೇಶಕ್ಕೆ ಹಾನಿ ಉಂಟು ಮಾಡುತ್ತಿದ್ದಾರೆ. ಬೈಕ್, ಜೀಪ್‌ಗಳಲ್ಲಿ ತಂಡೋಪತಂಡವಾಗಿ ಆಗಮಿಸಿ, ಪ್ಲಾಸ್ಟಿಕ್ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆದು ಕಪ್ಪತಗುಡ್ಡದ ಪರಿಸರವನ್ನು ಹಾಳು ಮಾಡುತ್ತಿದ್ದಾರೆ. ಪ್ರವಾಸಿಗರ ವರ್ತನೆ ಪ್ರಾಣಿ-ಪಕ್ಷಿಗಳ ಮೇಲೂ ಪರಿಣಾಮ ಬೀರುತ್ತಿದೆ. ಹೀಗಾಗಿ ಕಪ್ಪತಗುಡ್ಡ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಪ್ಪತಗುಡ್ಡ ವನ್ಯಜೀವಿ ಧಾಮವೂ ಆಗಿರುವುದರಿಂದ, ಅರಣ್ಯ ಪ್ರದೇಶದೊಳಗೆ ಪೂರ್ವಾನುಮತಿ ಪಡೆಯದೆ ಪ್ರವೇಶ ಮಾಡುವುದು ನಿಷಿದ್ಧ. ಆದರೂ ನಿಸರ್ಗಾಸಕ್ತರು, ಪ್ರವಾಸಿಗರು ಕಪ್ಪತಗುಡ್ಡವನ್ನು ನೋಡಿ ಆನಂದಿಸಲಿ ಎಂದು ಒಂದಷ್ಟು ವಿನಾಯಿತಿ ನೀಡಲಾಗಿತ್ತು. ಇದರಿಂದ ಗುಡ್ಡದ ಪರಿಸರಕ್ಕೆ ಹಾನಿ ಆಗುತ್ತಿರುವುದರಿಂದ ಮತ್ತು ಅತಿಯಾದ ಮಳೆಯಿಂದ ಗುಡ್ಡದ ಮಣ್ಣು



ಕುಸಿಯುತ್ತಿರುವುದರಿಂದ ಮುಂದಿನ ಆದೇಶದವರೆಗೆ ಡೋಣಿ ಮಾರ್ಗವಾಗಿ ಕಪ್ಪತ್ತಗುಡ್ಡ ಗಾಳಿಗುಂಡಿಗೆ ಹೋಗುವ ರಸ್ತೆಯನ್ನು ಸಂಪೂರ್ಣವಾಗಿ ಬಂದ್ ಮಾಡಲಾಗಿದೆ ಎಂದು ಕಪ್ಪತಹಿಲ್ಸ್ ವಲಯ ಅರಣ್ಯಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

## ಚಿಕ್ಕಮಗಳೂರಿನಲ್ಲಿ ಮುಂದುವರೆದ ಮಳೆ.. ಅವಘಡಗಳಿಗೆ ಜನ ತತ್ತರ

■ವಿಜಯಸಾಕ್ಷಿ ಸುದ್ದಿ, ಚಿಕ್ಕಮಗಳೂರು

ಜಿಲ್ಲೆಯಲ್ಲಿಮಳೆ ಅವಾಂತರ ಮುಂದುವರೆದಿದೆ. ಮಳೆಯ ಅಬ್ಬರಕ್ಕೆ ಕೆಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿದೆ. ಚಿಕ್ಕಮಗಳೂರು ತಾಲೂಕಿನ ಕಾಮೇನಹಳ್ಳಿ ಗ್ರಾಮದಲ್ಲಿ ನಿನ್ನೆ ರಾತ್ರಿಯಿಂದಲೂ ರಸ್ತೆಯ ಮೇಲೆ ಹಳ್ಳದ ನೀರು ಉಕ್ಕಿ ಹರಿಯುತ್ತಿದೆ.

ಮುಳ್ಳಯ್ಯನಗಿರಿ ಭಾಗದಲ್ಲಿ ಭಾರಿ ಮಳೆ ಹಿನ್ನೆಲೆ, ಹಳ್ಳದ ನೀರಿನ ಮಟ್ಟ ಕ್ಷಣಕ್ಷಣಕ್ಕೂ ಏರಿಕೆ ಆಗುತ್ತಿದೆ. ಹತ್ತಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಮೇಲೆ ನೀರು ಹರಿಯುತ್ತಿದೆ. ಇದರಿಂದಾಗಿ ಮಲ್ಲೇನಹಳ್ಳಿ, ಕಾಮೇನಹಳ್ಳಿ ಗ್ರಾಮಸ್ಥರು ಪರದಾಟ ನಡೆಸುತ್ತಿದ್ದಾರೆ.

ಕೊಪ್ಪ ತಾಲೂಕಿನ ಹೆರೂರು ಗ್ರಾಮದಲ್ಲಿ ಮಳೆಯ ಅಬ್ಬರಕ್ಕೆ ಸುಮಾರು 90 ಅಡಿ ಭೂ ಕುಸಿತ ಉಂಟಾಗಿರುವ ಘಟನೆಯೂ ನಡೆದಿದೆ. ಸುಮಾರು ಏಳಕ್ಕೂ ಹೆಚ್ಚು ಗ್ರಾಮಗಳಿಗೆ ಸಂಪರ್ಕಿಸುವ ಮುಖ್ಯ ರಸ್ತೆ ಇದಾಗಿದ್ದು, ಶಾಂತಿ ಕೂಡಿಗೆ, ಶುಂಠಿ ಕೂಡಿಗೆ, ಬಿಟ್ಟ ಕೂಡಿಗೆ ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

ಮಳೆ ಹೆಚ್ಚಾದಂತೆ ಸ್ವಲ್ಪ ಸ್ವಲ್ಪವೇ ಭೂಮಿ ಕುಸಿಯುತ್ತಿದೆ. ಇದೀಗ ಮತ್ತಷ್ಟು ರಸ್ತೆ ಕುಸಿಯುವ ಭೀತಿಯಲ್ಲಿ ಜನರು ಸಿಲುಕಿದ್ದಾರೆ. ಕೊಪ್ಪ ತಾಲೂಕಿನ ಹೆರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಗ್ರಾಮಗಳು ಸಂಕಷ್ಟದ ಪರಿಸ್ಥಿತಿ ಎದುರಿಸುವಂತಾಗಿದೆ.

## ಪತ್ರಿಕಾ ದಿನಾಚರಣೆ, ಶಾಸಕರಿಗೆ ಸನ್ಮಾನ ಇಂದು

■ವಿಜಯಸಾಕ್ಷಿ ಸುದ್ದಿ, ರೋಣ

ಪಟ್ಟಣದ ರಾಜೀವ ಗಾಂಧಿ ವೈದ್ಯಕೀಯ ಮಹಾವಿದ್ಯಾಲಯದ ಸಭಾಭವನದಲ್ಲಿ ಶುಕ್ರವಾರ ಬೆಳಿಗ್ಗೆ 10ಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪ್ರತಿಕಾ ದಿನಾಚರಣೆ ಹಾಗೂ ನೂತನ ಶಾಸಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಗುಲಗಂಜಿಮಠದ ಗುರುಪಾದ ಸ್ವಾಮೀಜಿ, ಹಜರತ ಸಯ್ಯದಶಾ ಸುಲೇಮಾನ ಶಾವಲಿ ವಹಿಸುವರು. ಶಾಸಕ ಜಿ ಎಸ್ ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ರೋಣ ಪುರಸಭೆ ಉಪಾಧ್ಯಕ್ಷ ಮಿಥುನ ಪಾಟೀಲ ಡಿವಿಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವರು. ತಾಲೂಕು ಕಾರ್ಯನಿರತ ಪ್ರತಕರ್ತರ ಸಂಘದ ತಾಲೂಕಾ ಅಧ್ಯಕ್ಷ ಯಲ್ಲಪ್ಪ ತಳವಾರ ಅಧ್ಯಕ್ಷತೆ ವಹಿಸುವರು. ಸಂಘದ ಸದಸ್ಯ ಉಮೇಶ ಬಸನಗೌಡ್ರ ಪ್ರಾಸ್ತಾವಿಕವಾಗಿ ಮಾತನಾಡುವರು. ಸಪಪೂ ಕಾಲೇಜು ಪ್ರಾಚಾರ್ಯ ಬಿ ಎಸ್ ಮಾನೆದ ಉಪನ್ಯಾಸ ನೀಡುವರು. ಪುರಸಭೆ ಅಧ್ಯಕ್ಷೆ ರಂಗವ್ವ ಭಜಂತ್ರಿ, ಡಾ. ಐ ಬಿ ಕೊಟ್ಟೂರಶೆಟ್ಟರ, ತಹಸೀಲ್ದಾರ ವಾಣಿ ಉಂಕಿ, ರವಿ ಎ ಎನ್, ಬಸಮ್ಮ ಹೂಲಿ, ಎಂ ಕೃಷ್ಣನಾಯಕ, ಎಲ್ ಕೆ ಜೂಲಕಟ್ಟಿ, ರವಿಂದ್ರಗೌಡ ಪಾಟೀಲ, ಗಿರೀಶ ಹೊಸೂರ, ಬಲವಂತ ನಾಯ್ಕರ, ಜಗದೀಶ ಮಡಿವಾಳರ, ಎಸ್ ಬಿ ಹರ್ತಿ, ಡಾ. ಶಕೀಲಹ್ಮದ ಡಿ, ಗಾಯತ್ರಿ ಸಜ್ಜನರ, ಬಸವರಾಜ ಅಂಗಡಿ, ರಾಮಣ್ಣ ಪೂಜಾರ, ಗಂಗಾಧರ ಬಡಿಗೇರ, ರೇಷ್ಮಾ ಕಣವಿ, ಜಗದೀಶ ಬಿ, ಜಿಲ್ಲಾ ಕಾನಿಪ ಸಂಘದ ಅಧ್ಯಕ್ಷ ರಾಜು ಹೆಬ್ಬಳ್ಳಿ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್ ಎಂ ಶರೀಫನವರ, ಜಿಲ್ಲಾ ಕಾರ್ಯದರ್ಶಿ ಮೆಹಬೂಬ ಮೋತೆಖಾನ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಸಂಜೀವ ಪಾಂಡ್ರೆ ಭಾಗವಹಿಸುವರು.

**ಮಾಜಿ ಸೈನಿಕರ ಸಂಘ, ಪ್ಯಾರಾಮಿಲಿಟರಿ ಸಂಘಟನೆಯಿಂದ ಕಾರ್ಗಿಲ್ ವಿಜಯೋತ್ಸವ**

# ಹುತಾತ್ಮ ವೀರಯೋಧರಿಗೆ ಗೌರವ ನಮನ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಮಾಜಿ ಸೈನಿಕರ ಸಂಘ, ಮಾಜಿ ಹಾಗೂ ಹಾಲಿ ಪ್ಯಾರಾಮಿಲಿಟರಿ ಯೋಧರ ಕಲ್ಯಾಣ ಸಂಘ ಗದಗ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ 24ನೇ ಕಾರ್ಗಿಲ್ ವಿಜಯೋತ್ಸವ ಹಾಗೂ ಹುತಾತ್ಮ ವೀರಯೋಧರಿಗೆ ಗೌರವ ನಮನ ಸಲ್ಲಿಸುವ ಕಾರ್ಯಕ್ರಮವು ಬುಧವಾರ ಗದುಗಿನ ಮಹಾತ್ಮಾ ಗಾಂಧಿ ಸರ್ಕಲ್ ಬಳಿ ನಡೆಯಿತು.

ಮಹಾತ್ಮಾ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಮಾಜಿ ಯೋಧರು ಹಾಗೂ ವೀರನಾರಿಯರು, ಸರ್ಕಲ್ ಬಳಿ ನಿರ್ಮಿಸಲಾಗಿದ್ದ ವೇದಿಕೆಯಲ್ಲಿ ಹುತಾತ್ಮ ವೀರಯೋಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.



ಗದಗ ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಗೂಳಯ್ಯ ಮಾಲಗಿತ್ತಿಮಠ ಕಾರ್ಗಿಲ್ ವಿಜಯೋತ್ಸವ ಕುರಿತು, ಮಾಜಿ ಹಾಗೂ ಹಾಲಿ ಪ್ಯಾರಾಮಿಲಟರಿ ಯೋಧರ ಕಲ್ಯಾಣ ಸಂಘ ಅಧ್ಯಕ್ಷ ನಾಗರಾಜ ಕುಂದರಗಿ ಕಾರ್ಗಿಲ್ ವಿಜಯೋತ್ಸವದಲ್ಲಿ ಪ್ಯಾರಾ ಮಿಲಿಟರಿಯಯ ಪಾತ್ರದ ಕುರಿತು ಮಾತನಾಡಿದರು. ಮಾಜಿ ಸೈನಿಕ ದತ್ತಣ್ಣ ಜೋಷಿ ಮಾತನಾಡಿ, ಕಾರ್ಗಿಲ್ ವಿಜಯೋತ್ಸವದ ವಿಷಯವನ್ನು ಪಠ್ಯ-ಪುಸ್ತಕದಲ್ಲಿ ಸೇರಬೇಕು. ವಿದ್ಯಾರ್ಥಿಗಳಲ್ಲಿ ದೇಶಾಭಿಮಾನ ಮೂಡಿ ದೇಶಸೇವೆ ಮಾಡಲು ಪ್ರೇರಣೆ ನೀಡುವಂತಾಗಬೇಕು ಎಂದರು. ನಿವೃತ್ತ ಉಪನ್ಯಾಸಕಿ ಲಕ್ಷ್ಮೀದೇವಿ ಕಟ್ಟಿಮನಿ, ಬಡಾವಣೆ ಪೊಲೀಸ್ ಠಾಣೆಯ ಪಿಎಸ್‌ಐ ಉಮಾ ವಗ್ಗರ ಉಪಸ್ಥಿತರಿದ್ದರು.

ಗದಗ ಜಿಲ್ಲಾ ಮಾಜಿ ಸೈನಿಕರ ಸಂಘದ ಅಂದಾನಪ್ಪ ಯರಗೇರಿ, ಚನ್ನವೀರಪ್ಪ ಸೊನ್ನದ, ವೀರಪ್ಪ ಬ. ಬಿಂಗಿ, ಎಚ್.ಬಿ ಜಂಗಣ್ಣವರ, ವ್ಹಿ.ಬಿ ಅಬ್ಬಿಗೇರಿ, ಎಸ್.ಎಫ್ ಹೊನ್ನಪ್ಪನವರ, ಎಸ್.ವ್ಹಿ ಸರ್ವಿ, ಜಿ.ಬಿ ಅರವಟಗಿಮಠ, ಕೆ.ಎಸ್ ಹಿರೇಮಠ, ಎ.ಎಂ ತಹಶೀಲ್ದಾರ, ಶರೀಫ ಹಿರೇಹಾಳ, ಯಲ್ಲಪ್ಪಗೌಡ ಹುಲ್ಲೂರ, ಬಸನಗೌಡ ಪಾಟೀಲ, ಯಲ್ಲಪ್ಪ ಸಂಕದಾಳ, ಹನಮಪ್ಪ ಹಾವರಗಿ, ಸಂಗಪ್ಪ ಹೊನ್ನಪ್ಪನವರ, ವಾಸಪ್ಪ ಶಟವಾಜಿ, ಎಂ.ಎಸ್ ಗುಜ್ಜಲ, ಎಸ್.ಎನ್ ಮಡಿವಾಳರ, ಎಸ್.ಎಸ್ ವಡ್ಡಿನ, ಜ್ಯೋತಿ ರೆಡ್ಡಿ, ಶಿವಾನಂದ ಬಸವರೆಡ್ಡಿ, ಚನ್ನಯ್ಯ ಬಳಗಾನೂರಮಠ, ಎಂ.ಎಸ್ ನಮಾಜಿ, ವೀರಣ್ಣ ಚೇಗರಡ್ಡಿ, ಎನ್.ಎಚ್ ಕಂಬಳಿ, ಚಿಕ್ಕೊಪ್ಪ, ಬಿ.ಎಲ್ ಪಾಟೀಲ, ಶಿವಪ್ಪ ಕಣವಿ, ಪರಸಪ್ಪ ಗುಂಡಳ್ಳಿ ಎಚ್.ಡಿ ಹನೀಫ, ನಾಗರಾಜ ಪಿನಾಕಿಮಠ, ಈರಣ್ಣ ತಳ್ಳಿಕೇರಿ ಮಾಬುಸಾಬ ಟೆಕ್ಕೇದ, ವೀರನಾರಿಯರಾದ ಶಿವಲೀಲಾ ಬಾವಿಕಟ್ಟಿ, ಶಾಂತಮ್ಮ ಹದ್ಲಿ, ಲಲಿತಾ ಬಳ್ಳಾರಿ, ಮೀನಾಕ್ಷಿ ಬದಿ ಮುಂತಾದವರಿದ್ದರು.

ಮಾಜಿ ಹಾಗೂ ಹಾಲಿ ಪ್ಯಾರಾಮಿಲಿಟರಿ ಯೋಧರ ಕಲ್ಯಾಣ ಸಂಘದ ಗೌರವ ಅಧ್ಯಕ್ಷ ವ್ಹಿ.ಎಸ್ ಅಕ್ಕಿ, ಉಪಾಧ್ಯಕ್ಷ ಸುರೇಶ ಮುಂಡವಾಡ, ಕಾರ್ಯದರ್ಶಿ ಬಸಯ್ಯ ಹಿರೇಮಠ, ರಾಜೇಶ ಬಂದು, ಮಲ್ಲಿಕಾರ್ಜುನ ಮಲ್ಲನಗೌಡ್ರ, ಗೌಸ್‌ಮುದ್ದೀನ್ ನದಾಫ, ಭೋಜರಾಜ ಮೊರಬದ, ಮಹಾಂತೇಶ ಲಕ್ಕುಂಡಿ, ಮಲ್ಲಯ್ಯ ಕರವೀರಮಠ, ಈಶ್ವರಚಂದ್ರ ಬಾಗಲಿ, ಎಂ.ಎ ಸಂಗನಾಳ, ಶಶಿಕಾಂತ ಕರಡಿ, ಆಂಜನೇಯ ಪೂಜಾರ, ಬಸಪ್ಪ ಚಲವಾದಿ, ಲಾಲಸಾಬ ಯಲಿಗಾರ, ಶಂಕರಗೌಡ ತಮ್ಮನಗೌಡ್ರ, ಶರಣಪ್ಪ ಬಾಳಿಕಾಯಿ, ಎಸ್.ಬಿ ಹೂಗಾರ, ಸುರೇಶ ಸಜ್ಜನ, ವೀರನಾರಿಯರಾದ ಗೀತಾ ತಹಶೀಲ್ದಾರ, ಶಿಲ್ಪಾ ಗೌರಣ್ಣವರ ಮುಂತಾದವರು ಪಾಲ್ಗೊಂಡಿದ್ದರು.

ಪಿ.ಎಂ.ಜಂಬಗಿ ಪ್ರಾರ್ಥಿಸಿದರು, ಎಸ್.ಆರ್.ಪಾಟೀಲ ಸ್ವಾಗತಿಸಿದರು ಸುಭಾಸಚಂದ್ರ ಪೆಂಟಾ ನಿರೂಪಿಸಿದರು ಕೊನೆಗೆ ಶೇಖಪ್ಪ ಹೊನ್ನಪ್ಪನವರ ವಂದಿಸಿದರು.

**ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ತೀರ್ಪು**

# ಸೇವಾ ನ್ಯೂನತೆ ಎಸಗಿದ ವಾಹನ ಶೋರೂಮ್‌ಗೆ ದಂಡ

■ವಿಜಯಸಾಕ್ಷಿ ಸುದ್ದಿ, ಗದಗ

ಗಜೇಂದ್ರಗಡದ ನಿವಾಸಿ ಚೇತನ ರಾಮಚಂದ್ರಶಾ ಬಾಕಳೆ ಇವರು ಚನ್ನಮ್ಮ ಅಟೋಮೊಟಿವ್ ಅಥೋರೈಸ್ಡ್ ಡೀಲರ್ ಅಶೋಕ ಲೈಲ್ಯಾಂಡ ಲೈಫ್ ವೈಹಿಕಲ್ಸ್ ಹುಬ್ಬಳ್ಳಿ ಇವರಿಂದ ಸರಕು ವಾಹನ ಖರೀದಿಸಿದ್ದರು. ವಾಹನದ ವಿಮೆ ನೋಂದಣಿ ಮತ್ತು ಪರ್ಮಿಟ್ ತಾವೇ ಮಾಡಿಸಿ ರಸ್ತೆಗೆ ಬಿಡುವ ಜವಾಬ್ದಾರಿಯ ಹಣ ಪಡೆದುಕೊಂಡಿದ್ದರು. ನೋಂದಣಿ ಮಾಡಿಸಿ ವಿಮೆ ಪಾಲಿಸಿಯನ್ನೂ ಪಡೆದಿದ್ದರು. ಆದರೆ ಪರ್ಮಿಟ್ ಮಾಡಿಸಿರಲಿಲ್ಲ. 21-06-2022ರಂದು ಕುಲ್ಗೋಡ-ಯಾದವಾಡ ರಸ್ತೆಯಲ್ಲಿ ಬೆಳಗಿನ ಜಾವ ಸದರಿ ವಾಹನ ಅಪಘಾತಕ್ಕೀಡಾಗಿ, ಹಾನಿಯಾಗಿತ್ತು. ಸದರಿ ವಿಷಯವನ್ನು ಶೋರೂಮ್ ಮತ್ತು ವಿಮಾ ಕಂಪನಿಗೆ ಚೇತನ ಬಾಕಳೆ ತಿಳಿಸಿ, ವಾಹನವನ್ನು ಶೋರೂಮಗೆ ಬಿಡಲಾಗಿತ್ತು.

ವಾಹನವನ್ನು ಪರ್ಮಿಟ್ ಇಲ್ಲದೆ ಚಾಲನೆ ಮಾಡಲಾಗಿದೆ ಎಂದು ವಿಮಾ ಕಂಪನಿಯವರು ವಾಹನದ ದುರಸ್ಥಿ ಹಣ ಕೊಡಲು ನಿರಾಕರಿಸಿದ್ದರು. ಶೋರೂಮ್‌ನವರು ಅಪಘಾತ ಆದ ನಂತರ ಪರ್ಮಿಟ್ ಪಡೆದಿದ್ದರು. ನಂತರ ಚೆನ್ನಮ್ಮ ಶೋರೂಮ್‌ನವರು ವಾಹನದ ದುರಸ್ಥಿ ಖರ್ಚು ಮತ್ತು ಪಾರ್ಕಿಂಗ್ಶುಲ್ಕರೂ. 45 ಸಾವಿರ ರೂ ಕೊಟ್ಟು ವಾಹನ ಪಡೆದುಕೊಳ್ಳಲು ನೋಟಿಸ್ ನೀಡಿದ್ದರು.




ಅನಿವಾರ್ಯವಾಗಿ, ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿ, ವಿಮಾ ಕಂಪನಿ ಹಾಗೂ ಚೆನ್ನಮ್ಮ ಶೋರೂಮ್‌ನರವರು ಸೇವಾ ನ್ಯೂನತೆ ಎಸಗಿದ್ದು, ವಿಮಾ ಹಣ ಕೊಡಲು ಕೋರಿ ಚೇತನ ಬಾಕಳೆ ದೂರು ಸಲ್ಲಿಸಿದ್ದರು. ವಿಮಾ ಕಂಪನಿ ಹಾಗೂ ಚೆನ್ನಮ್ಮ ಶೋರೂಮ್‌ನವರು ವಕೀಲರ ಮೂಲಕ ಹಾಜರಾಗಿ, ತಮ್ಮ ತಕರಾರಿನಲ್ಲಿ ಪುನಃ ಪರಿಹಾರ ಹಣ ಕೊಡಲು ಸಾದ್ಯವಿಲ್ಲ ಎಂದು ವಾದ ಮಾಡಿದ್ದರು.

ಆಯೋಗದ ಅಧ್ಯಕ್ಷ ಡಿ ವಾಯ್ ಬಸಾಪುರ, ಸದಸ್ಯ ರಾಜು ನಾಮದೇವ ಮೇತ್ರಿ ಯಶೋಧಾ ಭಾಸ್ಕರ ಪಾಟೀಲರವರನ್ನು ಒಳಗೊಂಡ ಪೀಠವು ಸುದೀರ್ಘ ವಿಚಾರಣೆ ಮಾಡಿ, ಪರ್ಮಿಟ್ ಇಲ್ಲದೆ ಚಾಲನೆ ಮಾಡಿ ಅಪಘಾತಕ್ಕೀಡಾಗಿದ್ದು, ವಿಮಾ ಪಾಲಿಸಿಯ ನಿಯಮಗಳನ್ನು ಉಲ್ಲಂಘನೆ ಮಾಡಿರುವದರಿಂದ ರೀಲೈನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ ಹುಬ್ಬಳ್ಳಿ ಇವರು ಪರಿಹಾರ ಕೊಡಲು ಜವಾಬ್ದಾರರಲ್ಲ ಅಂತಾ ತೀರ್ಪು ನೀಡಿದ್ದರು. ಚೆನ್ನಮ್ಮ ಶೋರೂಮ್‌ನವರು ವಾಹನ ಮಾಲೀಕನಿಂದ ವಿಮಾ ನೋಂದಣಿ ಪರ್ಮಿಟ್ ಹಣ ಪಡೆದುಕೊಂಡಿದ್ದರೂ ಸಹ ಅಪಘಾತ ಪೂರ್ವ ಪರ್ಮಿಟ್ ಮಾಡಿಸದೆ, ಸೇವಾ ನ್ಯೂನತೆ ಎಸಗಿದ್ದು ಸಾಬೀತಾಗಿದೆ ಎಂದು ತೀರ್ಪು ನೀಡಿದೆ. ವಾಹನವನ್ನು ದುರಸ್ಥಿ ಮಾಡಿ ಉತ್ತಮ ಸ್ಥಿತಿಯಲ್ಲಿ ದೂರುದಾನಿಗೆ ವಾಪಸ್ ಕೊಡಲು ಚೆನ್ನಮ್ಮ ಶೋರೂಮ್‌ಗೆ ಆದೇಶ ಮಾಡಲಾಗಿದೆ.

ದೂರುದಾರನು ಆಯೋಗಕ್ಕೆ ಅಲೆದಾಡಿ ಮಾನಸಿಕ ಹಿಂಸೆ ಅನುಭವಿಸಿದ್ದರಿಂದ, 10 ಸಾವಿರ ರೂ.ಗಳ ಹೆಚ್ಚಿನ ಪರಿಹಾರ ಹಾಗೂ ಪ್ರಕರಣದ ಖರ್ಚು 5 ಸಾವಿರ ರೂ.ಗಳನ್ನು ಕೊಡಲು ಆದೇಶ ಹೊರಡಿಸಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka